when demands are moved. My respectful submission is, in the light of the fact that invariably every Hon'ble Member makes a reference to matters relating to food during the course of the general discussion on the Budget, perhaps it may be necessary to devote half a day for the food debate and if you agree that the general discussion on the Budget should be continued till the lunch hour on Monday with the speeches of other Members as well as replies on behalf of Government and that after the lunch hour, the time should be devoted for food debate, perhaps that will meet the ends of necessity and there may be no room for any further extension. That is my respectful submission.

Mr. SPEAKER.—May I know the time the Ministers propose to take to reply to the debate on the Budget?

Sri A. G. RAMACHANDRA RAO (Minister for Law and Education).—Instead of the Ministers being put to the necessity of replying at the end of the debate, I request that they might be permitted to reply of and on during the course of the debate so that we may finish this in time. This is only if the House agrees.

Sri T. SIDDALINGAIYA.—Altogether about 2 hours may be set apart.

Mr. SPEAKER—In that case it may not be possible to conclude the general discussion on the Budget before lunch time. From 12 NOON to 1 P.M. we will be having Questions and Answers. Then there will be only two hours available up to the lunch hour. The other Members therefore will not have any opportunity to speak at all.

Sri T. SIDDALINGAIYA.—I am willing for an extension.

Mr. SPEAKER.—The Government have agreed to a full day's extension.

BUDGET FOR 1952-53—GENERAL DISCUSSION—(*contd.*).

FIRST STAGE.

Sri B.V. NARAYANA REDDY (Bagepalli—Gudibanda).—Sir, in my opinion the budget is simply heart-rending, especially to the people of the distressed and famine stricken areas. There are nearly three millions of them today. First and foremost, the fundamental and basic need is food for a human being and fodder for cattle. If any Government is not able to supply food and fodder, I think it is but just that that Government could as well resign. Is it not the duty of a sane Government to look after the lives of its people and its wealth—wealth, which is the cattle needed by men for agriculture? But what is our Govrnment doing except trying to close the eyes of the general public by throwing a paltry sum of rupees twenty lakhs in the guise of famine relief? There are really twenty lakhs of people who are suffering on account of famine. Are they throwing one rupee for every person? Moreover this relief has to be continued right up till we get the next crop, and that will take another six months. As it is, we have no rains. How are we to be sure that there will not be another famine once again? In the light of that, at least about ninety lakhs of rupees must be set apart only for Kolar District.

Sri Kadidal MANJAPPA (Minister for Revenue and Public Works).—Rich men like you must come forward.

Sri B. V. NARAYANA REDDY.—I do come forward provided the Government also come forward.

Sri H. SIDDAVEERAPPA (Minister for Home Affairs and Agriculture).—How far have you come forward?

Sri B. V. NARAYANA REDDY.—At least by talking. I am feeding at least 100 persons per day. I may assure the Hon'ble Member that I am trying to do my utmost in my place. I am feeding them all free. At this stage I would like to know whether the sanctity of Gomata has degenerated to such a level as to be ignored by the Government even when they are dying in their thousands; when these dumb creatures whom we are exploiting to the utmost are dying in their thousands, are the Government justified in saying that there is lack of transportation and wash their hands off the situation by trying to send a few hundreds of tons of hay?

(SRI B. V. NARAYANA REDDY)

Is this what Gandhiji said? What would the posterity say of such a helpless Government? Would it be incompetence, or shall I say lack of zeal, or shall I say lack of tact to deal with matters at the right moment in the right way? I want the Government to take necessary action. Mere words will not do. Is it not in such extraordinary times as these that the people look up to the Government for which they have done so much by paying taxes ungrudgingly from times immemorial? There is nothing strange in people looking up to the Government to relieve them from starvation. If it cannot be done for any reason whatsoever, why should such an incompetent Government exist at all? Should it exist because it can shut the eyes of the public by false propaganda, persistently crying that there is not much of famine and printing in its Information Bulletin photos to show to the public that it has been doing wonders in the way of digging wells even at considerable cost? The photo is printed in the Information Bulletin of the Hon'ble Minister for Home inspecting a well in Bagepalli. This is called distress relief. Should Government degenerate to such a level as this?

Sri H. SIDDAVEERAPPA.—Sir, I take exception to this statement. Government have not degenerated. On the other hand, Government have given the poor man there some money.

Sri B. V. NARAYANA REDDY.—But why should Government make such sweeping statements? They give us to understand that the whole work is being done by them.

Sri H. SIDDAVEERAPPA.—They are not interested in blowing their own trumpets. But they are interested in doing their duty.

Sri Kadidal MANJAPPA.—So far as Kolar District is concerned, we have done our best.

Janab J. MOHAMED IMAM (Jagalur).—The Ministers will have a chance to reply to the statements. I think it is better that the Member is allowed to speak in his own way. I think that when the Ministers get their chance they can certainly answer all these points. Otherwise by these interruptions, my friend might lose the thread of his argument. Let him say what he wants to say without interruption.

Sri A. BHEEMAPPA NAIK (Molakalmuru).—Can he be allowed to say 'degenerate' and so on, without being corrected?

Sri B. V. NARAYANA REDDY.—In spite of such propaganda, why does it not own that there is famine, proclaim to the Centre the real state of affairs and enlist their sympathy of which they are not lacking as we see them helping a great deal our neighbouring State? Does this Government feel it below its dignity to enlist the sympathy of the Centre? I pray to God to give them commonsense at least at this juncture to realise the gravity of the situation and to realise where they are leading the poor uneducated masses of the famine areas. So much about famine. What about the always drought-stricken districts of Kolar, Chitaldrug and Tumkur which are almost facing famine with their average rainfall of about 15 inches? Is the Government so fatalistic as to leave the millions of these parts to their own fate or are they going to take up some concrete works to see that the people are delivered from the clutches of the mighty Nature? If they are prepared to take up some measures to permanently wipe out famine in these areas, the Government will get co-operation from all parties. I am declaring in your presence that not only ourselves but every human being worth the name will come forward and contribute in every respect.

Let the Government give electricity to these parts ungrudgingly, without skulkingly trying to give it outside the State as the previous Government did before, ignoring and by-passing my constituency of Bagepally and Gudibanda.

The Government must make it a point to give top priority to such of the taluks which have been unfortunately neglected hitherto. Let the Government take up the question of digging bore-wells in the tank beds as well as desilting tanks. Let it not concentrate on

big rivers and big projects but on major and minor tanks. Let it also consider the question of constructing anecuts to rivers like Chitravati and exploiting the subterranean waters of Palar, Pennar and Pinakini. With these measures ardently taken up and implemented, the famine will not once again raise its head in these parts.

Speaking of education, Hon'ble Speaker in the capacity of Minister once told a huge gathering at Ellodu that our constituency stands second in the whole State in the reverse order, the first being, to my surprise, Mysore Taluk.

Mr. SPEAKER.—In what?

Sri B. V. NARAYANA REDDY.—In illiteracy.

Mr. SPEAKER.—It is a fact.

Sri B. V. NARAYANA REDDY.—I am sure it is not out of any fault on the part of the general public but it is because of the lack of sympathy of the Government that ruled before. I hope, now at least, that the present Government would give top priority to these taluks until such time as they come up to the level of other taluks. I am sure it is a just demand. At this juncture I would like to tell you that the Constitution of India has guaranteed primary school education in the mother tongue of the pupil. If this is not implemented let the Government know that it is violating the Constitution. And so from now on let all the primary schools in the Telugu speaking districts of the State be converted into Telugu Schools immediately.

There is another injustice of a great magnitude that is being done in the areas with sparse vegetation, There is scanty rainfall. They say vegetation draws rains. They say they must plant as many trees as possible. At the same time they are devastating what little forests and vegetations we have in our parts, in the guise of fuel and charcoal supply to the cities. Is this justice? In the name of justice, I would call upon the Government to put a stop to this nonsense at once and see ....

Mr. SPEAKER.—The Hon'ble Member is using very strong words.

Sri B. V. NARAYANA REDDY.—Yes, sir, I am. Soft words will not make them respond.

Sri A. G. RAMACHANDRA RAO.—Strong words break no bones.

Sri B. V. NARAYANA REDDY.—True, but if I do not use strong words there would be no response. At least there is this much of response.

I would call upon Government to see that the havoc is redressed by afforesting wherever it is deforested. The Government is not getting even a few thousand rupees out of coupes that are given. It is only filling the purses of the contractors, merchants and the Forest Officers. Let the Government see through the insaneness of these havocs and finally put a stop to them.

Sir, there is another burden that the people of Kolar District are bearing from the days of Land Revenue taxation. They are paying a sum of Re. 1 to about Rs. 3 per acre of dry land and Rs. 6 to Rs. 10 in the case of wet and garden lands. This is done nowhere in the State. The dry assessment in the borders of our district is only a few annas. There were rumours once that a committee was set up to revise this kind of levy. I do not know at what stage it stopped. I hope this Government will take up this question and do away with the injustice.

Mr. SPEAKER.—I think the assessment for dry land is Rs. 2-12-0 per acre.

Sri B. V. NARAYANA REDDY.—That is why I said ' about Rs. 3 per acre'. I conclude by pointing out to the Government another unpardonable and unjustified taxation levied on the tax payers of Bagepally, Gudibanda and Mulbagal Taluks, and that is the railway cess that is being paid by them since the days of the *chota* railway. This railway goes nowwhere near these taluks, does not help the people in any respect whatsover, and so, why should these people be made to bear the burden of taxation from which somebody else enjoys?

Hoping all these things would be implemented, I close my speech.

ಶ್ರೀ ಬಿ. ಮಾಧವಾಚಾರ್‌ರವರು (ಭದ್ರಾವತಿ).—ಮಾನ್ಯ ಅಧ್ಯಕ್ಷರೇ, ಮೂರು ದಿನಗಳಿಂದಲೂ ಈ ಆಯ ವ್ಯಯ ಪಟ್ಟಿಯ ಬಗ್ಗೆ ವಿಪುಲವಾಗಿ ಚರ್ಚೆ ನಡೆದಿದೆ,

(ಶ್ರೀ ಬಿ. ಮಾಧವಾಚಾರ್ಯರವರು.)

ಅನೇಕ ಅಭಿಪ್ರಾಯಗಳು ವ್ಯಕ್ತವಾಗಿವೆ. ಆರ್ಥಿಕವಾಗಿ ಮೈಸೂರು ಸಂಸ್ಥಾನವು ಒಂದು ವಿಪತ್ಕಾರಕ ಸನ್ನಿವೇಶದಲ್ಲಿದ್ದಾಗ ಈ ಮಂತ್ರಿ ಮಂಡಲ ಅಧಿಕಾರವನ್ನು ಕೈಗೆ ತೆಗೆದುಕೊಂಡಿತು. ಎಷ್ಟು ನಿಪುಣತೆಯಿಂದಲೂ ಭಾವಶುದ್ಧಿಯಿಂದಲೂ ನಮ್ಮ ಮೈಸೂರು ಮಂತ್ರಿಮಂಡಲ ಆರ್ಥಿಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು ಎಂಬುದನ್ನು ಹಿನ್ನೆಲೆಯಾಗಿಟ್ಟುಕೊಂಡು ಈ ಆಯವ್ಯಯ ಪಟ್ಟಿಯನ್ನು ವಿಮರ್ಶಿಸುವುದಾದರೆ, ನಾವು ನಮ್ಮ ಆರ್ಥಿಕ ಸಚಿವರ ದೂರದೃಷ್ಟಿ ಮತ್ತು ಅವರ ಮೇಧಾಶಕ್ತಿ ಇವುಗಳನ್ನು ಕುರಿತು ಅಭಿನಂದಿಸದೇ ವಿಧಿಯಿಲ್ಲ. ಮುಖ್ಯವಾಗಿ ಈ ಆಯವ್ಯಯಪಟ್ಟಿ ಜೋತಾ ಆಯವ್ಯಯ ಪಟ್ಟಿಯಾದರೂ ಕೂಡ ಸರ್ಕಾರದವರು ವಿದ್ಯಾಭ್ಯಾಸಕ್ಕೆ ಕೊಟ್ಟಿರುವ ಪ್ರಾಶಸ್ತ್ಯವನ್ನು ನೋಡಿದರೆ ನಿಜವಾಗಿಯೂ ದೇಶದಲ್ಲಿ ಪ್ರಜಾಪ್ರಭುತ್ವ ಪದ್ಧತಿ ಯಶಸ್ವಿಯಾಗಿ ನಡೆಯಬೇಕಾದರೆ ಜನಗಳು ವಿಚಾರವಂತರಾಗಬೇಕು, ವಿದ್ಯಾವಂತರಾಗಬೇಕು ಎಂಬ ಧ್ಯೇಯವೇನಿದೆಯೋ ಅದನ್ನು ಅವರು ಮರೆತಿಲ್ಲ, ಅದಕ್ಕೆ ಸಾಕಷ್ಟು ಅವಕಾಶವನ್ನು ಕಲ್ಪಿಸಿದ್ದಾರೆ ಎಂಬುದು ವ್ಯಕ್ತಪಡುತ್ತದೆ. ಆ ಬಗ್ಗೆ ನಿಜವಾಗಿಯೂ ನಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತೇನೆ.

ವಯಸ್ಕರ ವಿದ್ಯಾಭ್ಯಾಸದ ವಿಚಾರದಲ್ಲಿ ಕೆಲವು ಸದಸ್ಯರು ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿ ಅದನ್ನು ತಕ್ಷಣ ನಿಲ್ಲಿಸಬೇಕೆಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದು ಖಂಡಿತ ಸಾಧ್ಯವಾದದ್ದಲ್ಲ. ನಾನು ಈ ವಿಷಯದಲ್ಲಿ ಪ್ರತ್ಯಕ್ಷವಾಗಿ ಅನುಭವ ಪಡೆದಿದ್ದೇನೆ. ವಯಸ್ಕರ ವಿದ್ಯಾಭ್ಯಾಸ ಸಂಸ್ಥೆಯಿಂದ ಬಹಳಮಟ್ಟಿಗೆ ಕೆಲಸ ಆಗುತ್ತಾ ಇದೆ. ಗ್ರಾಮಾಂತರಗಳಲ್ಲಿ ಹೊಸ ಸ್ಫೂರ್ತಿ ಮತ್ತು ಚೈತನ್ಯ ತುಂಬಿ ತುಳುಕಾಡಲು ಇದು ಸಹಕಾರಿಯಾಗಿದೆ. ಈ ಸಂಸ್ಥೆಯವರು ನಡೆಸತಕ್ಕ ಕಾರ್ಯಗಳು, ಜನಗಳಿಗೆ ತಿಳಿಸತಕ್ಕ ವಿಷಯ, ಅಕ್ಷರ ಪ್ರಚಾರ ಇವುಗಳನ್ನು ಕುರಿತು ವಿಶ್ವಸಂಸ್ಥೆಯವರೂ ಸಹ ಮೆಚ್ಚಿಗೆಯನ್ನು ವ್ಯಕ್ತಪಡಿಸಿ ತಮ್ಮ ಸಂಸ್ಥೆಯಲ್ಲಿ ಮೈಸೂರು ಸಂಸ್ಥಾನದ ವ್ಯವಸ್ಥಾಪಕರನ್ನು ನೇಮಕಮಾಡಿಕೊಂಡಿದ್ದಾರೆಂದು ಗೊತ್ತಾಗಿದೆ. ಆದ್ದರಿಂದ ವಯಸ್ಕರ ವಿದ್ಯಾಭ್ಯಾಸ ಸಂಸ್ಥೆಗೆ ಬಡ್ಜೆಟ್ ಗ್ರಾಂಟ್ ಒದಗಿಸಿರುವುದು ಬಹಳ ಸ್ತೋತ್ರಾರ್ಹವಾದ ಸಂಗತಿ ಎಂದು ಅಭಿಪ್ರಾಯಪಡುತ್ತೇನೆ.

ದೇಶದಲ್ಲಿ ಮುಖ್ಯವಾದಂಥ ಸಮಸ್ಯೆ ಎಂದರೆ ಆಹಾರ ಸಮಸ್ಯೆ. ಆಹಾರ ಸಮಸ್ಯೆಯನ್ನು ಕುರಿತು ಇನ್ನೊಂದು ದಿವಸ ಚರ್ಚೆಮಾಡಲು ಅವಕಾಶವಿದೆ. ಆದರೂ ಈ ದಿವಸ ಅನ್ನ ಅಭಾವದ ವಿಚಾರಕ್ಕೆ ಗಮನ ಕೊಡದಿದ್ದರೆ ಕೆಲವು ಸದಸ್ಯರು ವ್ಯಕ್ತಪಡಿಸಿದಹಾಗೆ ದೇಶದಲ್ಲಿ ಕ್ಷೋಭೆಯಾಗಿ ಅನಾಹುತಗಳಿಗೆ ಅವಕಾಶವಾದರೂ ಆಗಬಹುದು ಎಂದು ಅಭಿಪ್ರಾಯಪಡುತ್ತೇನೆ. ಸರ್ಕಾರ ಈಗ ಕ್ಷಾಮ ಪ್ರದೇಶಗಳಲ್ಲಿ ಅಭಾವ ಪರಿಹಾರಕ್ಕಾಗಿ 20 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟು ಕೆಲಸ ಕಾರ್ಯಗಳನ್ನು ನೆರವೇರಿಸುತ್ತಿರುವುದರ ಜೊತೆಗೆ ಇನ್ನೂ ಹೆಚ್ಚು ಕೊಡುವುದಕ್ಕೂ ಸಿದ್ಧವಾಗಿ ಸಂಪೂರ್ಣ ಸಹಾನುಭೂತಿಯಿಂದ, ಮಾನವೀಯತೆಯ ಹೃದಯದಿಂದ ಕೂಡಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ದೇಶದಲ್ಲಿ ಈ ಒಂದು ಪರಿಸ್ಥಿತಿಯನ್ನು ನಿವಾರಣೆಮಾಡಬೇಕಾದರೆ ದೊಡ್ಡ ದೊಡ್ಡ ಪ್ರಾಜೆಕ್ಟುಗಳಿಗೆ ಹೆಚ್ಚು ಗಮನಕೊಡಬೇಕು. ಭದ್ರಾ ರಿಸರ್ವಾಯರ್, ಲಕ್ಕವಳ್ಳಿ ಪ್ರಾಜೆಕ್ಟು ಇವುಗಳನ್ನೆಲ್ಲಾ ಈಗ ನಡೆಯುತ್ತಿರುವಂತೆಯೇ ಮುಂದುವರಿಸಿದರೆ 20 ವರ್ಷಗಳಾದರೂ ಮುಗಿಯಲಾರವು. ಕೇಂದ್ರ ಸರ್ಕಾರದವರಿಂದ ಈ ಬಗ್ಗೆ ಹೆಚ್ಚಿಗೆ ಗ್ರಾಂಟ್ ಪಡೆಯಬೇಕಾದದ್ದು ಸರ್ಕಾರದವರ ಕರ್ತವ್ಯ. ಇದಕ್ಕೆ ತೀವ್ರ ಪ್ರಯತ್ನ ನಡೆಸಬೇಕು. ಕೇಂದ್ರ ಸರ್ಕಾರದವರು ದುಡ್ಡಿನ ಅಡಚಣೆ ಮುಂದಿಡುವುದಾದರೆ ಅನೇಕ ವಿಧಗಳಲ್ಲಿ ಸಲಹೆ ಕೊಡಬಹುದು. ಆರ್ಥಿಕ ಸಚಿವರು ಹೊಸ ತೆರಿಗೆಗಳಾವುದನ್ನೂ ಈ ಸಾರಿ ತಂದಿಲ್ಲ. ಇದು ಬಹಳ ಸಂತೋಷದ ವಿಚಾರ. ಇದೇ ರೀತಿ ಎಲ್ಲರೂ ಅಭಿಪ್ರಾಯಪಟ್ಟಿದ್ದಾರೆ. ಆ ರೀತಿ, ಹೊಸ ತೆರಿಗೆಗಳಾವುದನ್ನೂ ಹಾಕದೆ ಇದ್ದದ್ದರಲ್ಲೇ ಒಂದು ಸುಧಾರಣೆಮಾಡುವುದಕ್ಕೆ ಪ್ರಯತ್ನ ಮಾಡಿರುವುದು ಸ್ತೋತ್ರಾರ್ಹ. ನಮ್ಮ ದೊಡ್ಡ ದೊಡ್ಡ ಸಮಸ್ಯೆಗಳು ನಿವಾರಣೆಯಾಗಬೇಕಾದರೆ ಹೆಚ್ಚಿನ ಹಣದ ಆವಶ್ಯಕತೆಯಿರುವುದರಿಂದ ಹೊಸ ತೆರಿಗೆಗಳನ್ನು ಹಾಕಲೇಬೇಡಿ ಎಂದು ನಮ್ಮ ಸಚಿವರ ಕೈ ಕಟ್ಟುವುದಕ್ಕೆ ಸಲಹೆಮಾಡುವುದು ಸೂಕ್ತವಾಗಲಾರದು. ಯಾವ ದೇಶವೇ ಆಗಲಿ ಆರ್ಥಿಕ ಸಮಸ್ಯೆಯನ್ನು ಉತ್ತಮಗೊಳಿಸಲು ತೆರಿಗೆಯನ್ನು ಹಾಕಲೇಬೇಕಾಗುತ್ತದೆ. ಆದರೆ ಒಂದು ಅಂಶವನ್ನು ಮಾತ್ರ ಸರ್ಕಾರದವರು ಗಮನಿಸಬೇಕು. ಮಧ್ಯಮವರ್ಗದವರ, ಬಡವರ, ರೈತರ, ಕೂಲಿಗಾರರ ಮೇಲೆ ಯಾವುದೇ ವಿಧವಾದ ತೆರಿಗೆಯ ಹೊರೆ ಬೀಳದಹಾಗೆ ನೋಡಿಕೊಳ್ಳಬೇಕು. ಆ ರೀತಿ ಹಾಕಬೇಕಾಗಿದ್ದರೆ ಮರಣ ತೆರಿಗೆ ಮುಂತಾದುವನ್ನು ದೇಶದಲ್ಲಿ ಹಾಕಿ, ಅದರಲ್ಲಿ ನಾವು ಯಾವುದಾದರೂ ಒಂದು ಪಾಲನ್ನು ದೊರಕಿಸಿಕೊಳ್ಳುವ ಬಗ್ಗೆ ಕೇಂದ್ರ ಸರ್ಕಾರದವರಿಗೆ ಮೈಸೂರು ಸರ್ಕಾರದವರ ಸಲಹೆ ಕೊಡಬೇಕೆಂದು ಒತ್ತಾಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

10 A.M.

ಹೀಗೆ ಮೈಸೂರು ಸಂಸ್ಥಾನದಲ್ಲೂ ಕೂಡ ಅನೇಕ ವಿಧದಲ್ಲಿ ನಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ಮದ್ರಾಸ್ ಪ್ರಾಂತದಲ್ಲಿರುವಂತೆ ಅಗ್ರಿಕಲ್ಚರಲ್ ಇನ್‌ಕಂಮೇಲೆ ತೆರಿಗೆಗಳನ್ನು ತಂದಿದ್ದರೆ ನಮ್ಮ ಸ್ಥಿತಿ ಬಹಳಮಟ್ಟಿಗೆ ಸುಧಾರಿಸುತ್ತಿತ್ತು.

ಈಗ ನಮ್ಮ ಭದ್ರಾವತಿಯಲ್ಲಿ ಒಂದು ಫರ್ಟಿಲೈಸರ್ ಫ್ಯಾಕ್ಟರಿಯನ್ನು ಸ್ಥಾಪಿಸಬೇಕೆಂದಿದ್ದೀರಿ. ಇದರಿಂದ ಹೆಚ್ಚಿನ ಪ್ರಯೋಜನವಿದೆ ಎಂಬುದೇನೋ ನಿಜ. ಆದರೂ ನೀರಾವರಿ ಪ್ರಾಜೆಕ್ಟುಗಳ ಕಡೆ ಹೆಚ್ಚಿಗೆ ಗಮನಕೊಟ್ಟು ಬೇಗ ಪೂರೈಸುವುದಾದರೆ ನಮ್ಮ ದೇಶದ ಅನ್ನದ ಅಭಾವ ಕೊನೆಗಾಣುತ್ತದೆ. ಆದ್ದರಿಂದ ನಮ್ಮ ಸರ್ಕಾರದವರು ಅದರ ಬಗ್ಗೆ ತೀವ್ರಾಸಕ್ತಿಯನ್ನು ವಹಿಸಬೇಕೆಂದು ನಾನು ಹೇಳುತ್ತೇನೆ. ಈ ಸಾರಿಯ ಬಡ್ಜೆಟ್ಟಿನಲ್ಲಿ ಲಕ್ಕವಳ್ಳಿ ಪ್ರಾಜೆಕ್ಟಿಗಾಗಿ 16 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. ಇದು ಬಹಳ ಕಡಮೆ. ಆದರೆ ಈವತ್ತಿನ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡರೆ ಇದಕ್ಕಿಂತಲೂ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಅರಿತಿದ್ದೇವೆ. ಆದ್ದರಿಂದ ಇದಕ್ಕಾಗಿ ಕೇಂದ್ರ ಸರ್ಕಾರದವರನ್ನು ಹೆಚ್ಚಿಗೆ ಸಹಾಯ ಮಾಡುವಂತೆ ಒತ್ತಾಯಪಡಿಸಬೇಕೆಂದು ಹೇಳುತ್ತೇನೆ.

ಕೈಗಾರಿಕಾ ಅಭಿವೃದ್ಧಿಯ ವಿಚಾರದಲ್ಲಿ ನಮ್ಮ ಸರ್ಕಾರದವರು ಒಂದು ಸ್ಪೈಷಲ್ ಕಮಿಟಿಯನ್ನು ಏರ್ಪಡಿಸುವ ಯೋಚನೆಯಲ್ಲಿದ್ದಾರೆಂಬುದು ಮುಖ್ಯಮಂತ್ರಿಗಳ ಭಾಷಣದಿಂದ ಗೊತ್ತಾಗುತ್ತದೆ. ಆದರೆ ಇದರ ಬಗ್ಗೆ ವಿವರಗಳೇನೂ ಗೊತ್ತಿಲ್ಲದಿರುವುದರಿಂದ

ಅದು ಯಾವ ರೀತಿ ಕೆಲಸವಾಗುತ್ತದೆಂಬುದು ಗೊತ್ತಿಲ್ಲ. ಏನೇ ಆಗಲಿ, ಕೈಗಾರಿಕಾಭಿವೃದ್ಧಿಯನ್ನು ಬಯಸುವವರಿಗೂ, ದಕ್ಷರಿಗೂ, ಪ್ರಾಮಾಣಿಕತೆಯುಳ್ಳವರಿಗೂ ಅವಕಾಶಕೊಟ್ಟು ಯಾವುದೇ ವಿಧವಾದ ಸಂಕುಚಿತ ಭಾವನೆಗಳಿಗೆ ಅವಕಾಶ ಕೊಡದೆ ಕೈಗಾರಿಕೆಗಳ ಹಿತದೃಷ್ಟಿಯಿಂದ ಕೆಲಸಮಾಡಿದರೆ ಕೈಗಾರಿಕಾಭಿವೃದ್ಧಿಗೆ ಬಹುಮಟ್ಟಿಗೆ ಸಹಾಯವಾಗುತ್ತದೆ. ನಮ್ಮ ಭದ್ರಾವತಿಯ ವಿಚಾರವನ್ನು ತೆಗೆದುಕೊಂಡು ಹೇಳುವುದಾದರೆ, ಕೂಲಿಗಾರರ ವಿಷಯದಲ್ಲಿ ಹೆಚ್ಚಿನ ಸೌಹಾರ್ದದಿಂದ ವರ್ತಿಸಿ ಅವರಲ್ಲಿ ದೇಶಪ್ರೇಮವೂ, ನವಚೈತನ್ಯವೂ ರೂಪುಗೊಳ್ಳುವಂತೆ ಮಾಡುವುದಾದರೆ ಕೈಗಾರಿಕಾ ಉತ್ಪತ್ತಿಯನ್ನು ಹೆಚ್ಚು ಮಾಡಬಹುದೆಂಬುದರಲ್ಲಿ ಸಂದೇಹವಿಲ್ಲ. ಹೆಚ್ಚಿಗೆ ಲಾಭ ಸಂಪಾದನೆ ಕೂಡ ಮಾಡಬಹುದು. ಕೈಗಾರಿಕಾ ಮಾಲೀಕರುಗಳಿಗೂ ಕಾರ್ಮಿಕರುಗಳಿಗೂ ಮಧ್ಯೆ ಹುಟ್ಟುವ ವೈಮನಸ್ಯಗಳನ್ನು ಪರಿಹರಿಸುವುದಕ್ಕಾಗಿ ಕೈಗಾರಿಕಾ ಕೋರ್ಟೊಂದನ್ನು ಏರ್ಪಾಡುಮಾಡುವುದಾಗಿ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಈ ರೀತಿ ಕೂಲಿಗಾರರಿಗೆ ನ್ಯಾಯ ದೊರಕಿಸಿಕೊಡುವ ಒಂದು ಏರ್ಪಾಡುಮಾಡುವುದು ನಿಜವಾಗಿಯೂ ಸ್ವಾಗತಾರ್ಹವಾಗಿದೆ. ಭದ್ರಾವತಿ ಕಾರ್ಮಿಕ ಸಂಘಗಳವರೊಡನೆ ಒಡಾಡಿದವನಾಗಿ ನನ್ನ ಅನುಭವವನ್ನು ಹೇಳುವುದಾದರೆ, ಈಗ ಎಷ್ಟೋ ಸಂದರ್ಭಗಳಲ್ಲಿ ಕೂಲಿಗಾರರ ಮತ್ತು ಮ್ಯಾನೇಜ್‌ಮೆಂಟಿನವರ ಜಗಳಗಳನ್ನು ಇತ್ಯರ್ಥಪಡಿಸುವುದರಲ್ಲಿ ಬಹಳಮಟ್ಟಿನ ನಿಧಾನಕ್ಕೆ ಅವಕಾಶವಾಗಿದೆ. ಕೂಲಿಗಾರರು ಸ್ವಭಾವತಃ ಸಣ್ಣ ಸಣ್ಣ ವಿಚಾರಗಳಿಗೆ ಪ್ರಕೋಪಗೊಳ್ಳುವಂಥ ವ್ಯಕ್ತಿಗಳು. ಅವರನ್ನು ಸೇರಿಸಿ ಅವರ ಬೇಡಿಕೆಗಳನ್ನು ಎಷ್ಟೋ ದು ಸಹಾನುಭೂತಿಯಿಂದ ಕಾಣಬೇಕೋ ಅದು ಕಂಡುಬರದೆ ಅದರ ಅಭಾವವೇ ಕಂಡುಬಂದಿದೆ. ತತ್ಫಲವಾಗಿ, ಮುಷ್ಕರಗಳು, ಲಾಕ್‌ಔಟ್‌ಗಳು ಉಂಟಾಗಿ production ಕಡಮೆಯಾಗಿದ್ದಿರುವುದು ಕಂಡುಬಂದಿದೆ. ಎಷ್ಟೋ ಸಣ್ಣ ಸಣ್ಣ ವಿಚಾರಗಳಿಗಾಗಿ—ಉದಾಹರಣೆಗೆ ಒಂದು ಮೆಮೋ ಹೊರಡಿಸುವ ವಿಚಾರ—ಮ್ಯಾನೇಜ್‌ಮೆಂಟಿನವರು ಕೇವಲ prestige ಮೇಲೆ ತಮ್ಮ ವಾದವನ್ನೇ ಹಿಡಿದು ವರ್ತಿಸಿದ್ದುದರಿಂದ ಲಕ್ಷಾಂತರ ರೂಪಾಯಿಗಳ ನಷ್ಟಕ್ಕೆ ಅವಕಾಶವಾಗಿದೆ. ಆದ್ದರಿಂದ ಇಂಥ ವಿಚಾರಗಳಿಗೆ ತೀವ್ರ ಗಮನಕೊಟ್ಟು ಯಾವುದೇ ವಿಧವಾದ ಅನರ್ಥ ನಡೆಯದಹಾಗೆ ಕೂಲಿಗಾರರೊಡನೆ ನಿಕಟವಾದ ಸಂಪರ್ಕವನ್ನಿಟ್ಟುಕೊಂಡು ಪ್ರೊಡಕ್ಷನ್ ಬೋನಸ್ ಮೊದಲಾದ ಕ್ರಮಗಳಲ್ಲಿ ಅವರ ಅಹವಾಲುಗಳನ್ನು ಜಾರಿಗೆ ತಂದು ಸಾಧ್ಯವಾದಷ್ಟುಮಟ್ಟಿಗೆ ನಡೆಸಿಕೊಡುವುದಾದರೆ ಕೈಗಾರಿಕಾ ಕ್ಷೇತ್ರದಲ್ಲಿ ಶಾಂತಿ ನೆಲಸಿ ತನ್ಮೂಲಕ ಉತ್ಪನ್ನ ಹೆಚ್ಚುವುದಲ್ಲದೆ, ಸರ್ಕಾರದ ಆದಾಯವೂ ಹೆಚ್ಚುತ್ತದೆ. ಈ ದೃಷ್ಟಿಯಿಂದ ಕೈಗಾರಿಕಾ ಕೋರ್ಟು ಮಾಡುವುದು ಸ್ತೋತ್ರಾರ್ಹವಾಗಿದೆ. ಅದಕ್ಕಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನು ಲೇಬರ್ ಹೌಸಿಂಗ್ ಬಗ್ಗೆ ಕೇಂದ್ರದಿಂದ ಗ್ರ್ಯಾಂಟ್ ಪಡೆದು ಅದರಿಂದ ಕಾರ್ಯಕ್ರಮವನ್ನು ನಡೆಸುವಂಥ ಏರ್ಪಾಡುಮಾಡಿದ್ದೀರಿ. ಇದು ಬಹಳ ಸಂತೋಷದ ವಿಚಾರ.

ಸೇವಾದಳದ ಬಗ್ಗೆ ಹೊಸದಾಗಿ ಸುಮಾರು ಒಂದು ಲಕ್ಷ ರೂಪಾಯಿಗಳಷ್ಟು ಗ್ರ್ಯಾಂಟ್ ಕೊಟ್ಟಿದ್ದಾರೆ. ಇಷ್ಟನ್ನು ಸರಿಯಾಗಿ ಉಪಯೋಗಿಸಿಕೊಂಡು ಕೆಲಸ ಮಾಡಿದರೆ ಇದೊಂದು ಒಳ್ಳೆಯ ಸಂಸ್ಥೆಯಾಗಿ ಪರಿಣಮಿಸುತ್ತದೆಂಬುದರಲ್ಲಿ ಸಂದೇಹವಿಲ್ಲ. ನೀವೀಗ ಮದ್ಯಪಾನನಿರೋಧ ಕಾರ್ಯವನ್ನು ಕೈಕೊಂಡಿದ್ದೀರಿ. ಇದು ಈಗ ಸರಿಯಾಗಿ ನಡೆಯುತ್ತಿಲ್ಲವೆಂಬ ಕೂಗು ಕೇಳಬರುತ್ತಿದೆ. ಸರ್ಕಾರದವರೇನೋ ಅಂಕಿ ಅಂಶಗಳು ಸರಿಯಾಗಿ ಗೊತ್ತಿಲ್ಲವೆಂದು ಹೇಳಿದರು. ಆದ್ದರಿಂದ, ವಾಸ್ತವಾಂಶಗಳು ಏನೇ ಇರಲಿ, ಮಧ್ಯಪಾನನಿರೋಧ ಯಶಸ್ವಿಯಾಗಬೇಕಾದರೆ ಉಗ್ರವಾದ ಕಾನೂನು ಮಾತ್ರ ಇದ್ದರೆ ಸಾಕೆಂದು ನಾನು ಹೇಳಲಾರೆ; ಅದರ ಜೊತೆಗೆ ಬೇಕಾದಷ್ಟು ಪ್ರಚಾರ ಕಾರ್ಯ ಕೂಡ ಆವಶ್ಯಕವೆಂದು ಹೇಳುವವನು ನಾನು. ಅಜ್ಞಾನ, ಅನಕ್ಷರತೆ, ದಾರಿದ್ರ್ಯಗಳಿಂದ ಕೂಡಿರುವ ಇವರುಗಳಲ್ಲಿನ ದುಶ್ಚಟವನ್ನು ಹೋಗಲಾಡಿಸಬೇಕಾದರೆ ತಕ್ಕಮಟ್ಟಿಗೆ ಶಿಕ್ಷಣ ಪ್ರಚಾರ ನಡೆಯಲೇಬೇಕು. ನಮ್ಮ ಸೇವಾದಳದವರನ್ನು ಇಂಥ ಪ್ರಚಾರ ಕಾರ್ಯಗಳಿಗೆ ಉಪಯೋಗಿಸಿಕೊಂಡರೆ, ಈ ಸಂಸ್ಥೆಯಿಂದ ಹೆಚ್ಚಿನ ಪ್ರಯೋಜನ ಲಭಿಸಿದಂತಾಗುತ್ತದೆ. ಆದ್ದರಿಂದ ಸೇವಾದಳ ಸಂಸ್ಥೆಗಳನ್ನು ಇಂಥ ಕೆಲಸಗಳಿಗೆ ಉಪಯೋಗಿಸಿಕೊಳ್ಳಬೇಕೆಂದು ಆಶಿಸುತ್ತೇನೆ.

ಗ್ರಾಮಾಂತರ ಜನಜೀವನದ ಕಡೆಗೆ ನಮ್ಮ ಸರ್ಕಾರದವರು ವಿಶೇಷವಾಗಿ ದೃಷ್ಟಿಕೊಡುವ ಪ್ರಯತ್ನ ಕಾಣಬರುತ್ತಿದೆ. ಕಮ್ಯೂನಿಟಿ ಪ್ರಾಜೆಕ್ಟ್‌ಗಳೆಂದು ಕೈಕೊಂಡು ಗ್ರಾಮಾಂತರ ಜನಗಳಿಗೆ ಹೊಸ ಸ್ಫೂರ್ತಿ, ಹೊಸ ಆದರ್ಶ ಬೀರುವ ಘನೋದ್ದೇಶದಿಂದ ತಾವು ಕೂಡಿದ್ದೀರಿ. ಮೊಟ್ಟಮೊದಲನೆಯದಾಗಿ ಇಂಥ ಕಮ್ಯೂನಿಟಿ ಪ್ರಾಜೆಕ್ಟ್‌ಗಳ ಸೌಕರ್ಯ ಮಲೆನಾಡು ಪ್ರದೇಶಗಳಿಗೆ ಲಭಿಸಿರುವುದು ನ್ಯಾಯವಾಗಿದೆ. ಮಲೆನಾಡಿನ ಎಲ್ಲಾ ಪ್ರಜೆಗಳಿಗೂ ಹಾಗೂ ಸಂಸ್ಥಾನದ ಪ್ರಜೆಗಳೆಲ್ಲರಿಗೂ ಇದು ಸಂತೋಷದಾಯಕವಾದ ವಿಷಯ. ಈ ಯೋಜನೆ ಸರಿಯಾಗಿ ಕೆಲಸಮಾಡಿದ್ದೇ ಆದರೆ, ಅಲ್ಲಿನ ಜನರಲ್ಲಿ ಹೊಸ ವಿಚಾರ ಧಾರೆ ಹರಿದು ಅವರ ಜೀವನ ಕ್ರಮವೇ ಮಾರ್ಪಟ್ಟು ಅವರ ಪುರೋಭಿವೃದ್ಧಿಗೆ ಬಹಳ ಮಟ್ಟಿಗೆ ಸಹಾಯವಾಗುತ್ತದೆಂದು ನಂಬಿದ್ದೇನೆ.

ಇನ್ನು ನಮ್ಮ ದೇಶದ ಕೈಗಾರಿಕಾಭಿವೃದ್ಧಿಯ ವಿಚಾರ ಹೇಳುವುದಾದರೆ, ನಮ್ಮ ದೇಶಕ್ಕೆ ಒಂದು ಬಂದರಿಲ್ಲದ ಕೊರತೆಯಿಂದ ಬಹಳಮಟ್ಟಿಗೆ ನಮ್ಮ ಹಣ ಅಪವ್ಯಯವಾಗುತ್ತಿದೆ. ಏಕೆಂದರೆ ಭದ್ರಾವತಿ ಕಾರ್ಖಾನೆಗೆ ಕಲ್ಲಿದ್ದಲನ್ನು ತರಿಸಬೇಕಾದರೆ ರೈಲ್ವೆ ವ್ಯಾಗನ್ ಸಿಕ್ಕದೆ ಎಷ್ಟೋ ಸಾರಿ ಬಂಗಾಳದಿಂದ ಮದ್ರಾಸಿಗೆ, ಅಲ್ಲಿಂದ ಕೊಚಿನ್, ಮರ್ಮಗೋವ—ಹೀಗೆ ಬಹಳಸುತ್ತಿಕೊಂಡು ಬರಬೇಕಾಗುತ್ತದೆ. ಇದರಿಂದ ಟನ್ ಒಂದಕ್ಕೆ ಸುಮಾರು 39 ರೂಪಾಯಿ ಹೆಚ್ಚಿಗೆ ಖರ್ಚಾಗುತ್ತದೆ. ಇಷ್ಟೆಲ್ಲಾ ತೊಂದರೆ ಬಂದಿರುವುದು, ನಮ್ಮ ದೇಶಕ್ಕೆ ಹತ್ತಿರದಲ್ಲಿ ಪಶ್ಚಿಮ ತೀರದಲ್ಲಿ ಒಂದು ಬಂದರನ್ನು ಏರ್ಪಡಿಸದಿರುವುದರಿಂದ. ಮೈಸೂರಿನ ಕೈಗಾರಿಕೆಯ ದೃಷ್ಟಿಯಿಂದ ಈ ಬಂದರು ಬಹಳ ಮುಖ್ಯ. ಇದಕ್ಕಾಗಿ ನಮ್ಮ ಸರ್ಕಾರ ಬಹಳ ಕೆಲಸ ಮಾಡಬೇಕಾಗಿದೆ. ಆದ್ದರಿಂದ ನಮ್ಮ ಸರ್ಕಾರದವರು ತೀವ್ರ ಗಮನ ಕೊಟ್ಟು ನಿರ್ಧಾರ ತೆಗೆದುಕೊಂಡು ಕೇಂದ್ರ ಸರ್ಕಾರದವರನ್ನು ಒತ್ತಾಯಪಡಿಸಬೇಕು. ಕೇಂದ್ರ ಸರ್ಕಾರದವರು ಹಾಲಿ ಕೈಕೊಂಡಿರುವ ಕಂದಾಲ ಬಂದರಿನ ಕೆಲಸವೂ ಈಗಾಗಲೇ ಮುಗಿಯುತ್ತಾ ಬಂದಿದೆ. ಆದ್ದರಿಂದ ಈಗಿನ್ನು ಉಳಿದಿರುವುದು ಕರ್ಣಾಟಕದ ಬಂದರು ಮಾತ್ರ. ಈ ಬಗ್ಗೆ ನಮ್ಮ ಸರ್ಕಾರದವರು ಒತ್ತಾಯಪಡಿಸಿದರೆ ಮೈಸೂರು ಕೈಗಾರಿಕೆಗಳಿಗೆ ಹೆಚ್ಚಿನ ಸಹಾಯಮಾಡಿದಂತಾಗುತ್ತದೆ.

(ಶ್ರೀ ಬಿ. ಮಾಧವಾಚಾರ್‌ರವರು)

ಮಲೆನಾಡಿನ ಅಭಿವೃದ್ಧಿಯ ವಿಚಾರದಲ್ಲಿ ಈಗ ಕೆಲವು ವರ್ಷಗಳ ಹಿಂದೆಯೇ ಒಂದು ಸಮಿತಿಯು ಏರ್ಪಾಡಾಗಿ ಅವರ ವರದಿಯೂ ಸಿದ್ಧವಾಗಿದೆ. ಆದರೆ ಇನ್ನೂ ಈ ವರದಿಯು ಪ್ರಕಟವಾಗಿಲ್ಲ. ಅದನ್ನು ಆದಷ್ಟು ಬೇಗ ಪ್ರಕಟಣೆ ಮಾಡಬೇಕು ಮತ್ತು ಅದರಲ್ಲಿರುವ ಅಂಶಗಳ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಮಲೆನಾಡಿನ ಅಭಿವೃದ್ಧಿಯಾದಲ್ಲಿ ಮತ್ತು ಲಕ್ಕವಳ್ಳಿ ಪ್ರಾಜೆಕ್ಟು ಪೂರ್ಣವಾದಲ್ಲಿ ನಮ್ಮ ದೇಶದ ಆಹಾರಾಭಾವ ಹೋಗುತ್ತದೆಂದು ಹೇಳಬಹುದು. ಅಷ್ಟೇ ಅಲ್ಲದೆ ಮೈಸೂರು ದೇಶವು ಬೇರೆ ಪ್ರಾಂತಗಳಿಗೇ ಆಹಾರ ದೊರಕಿಸುವ ಯೋಗ್ಯತೆಯನ್ನೂ ಪಡೆದುಕೊಳ್ಳುತ್ತದೆ. ಆದ್ದರಿಂದ ಈ ಎರಡು ವಿಚಾರಗಳಲ್ಲಿ ಹೆಚ್ಚಿಗೆ ಗಮನಕೊಡುವುದಕ್ಕೆ ಕೇಂದ್ರ ಸರ್ಕಾರದವರ ದೃಷ್ಟಿಯನ್ನು ಸೆಳೆಯುವುದು ನಮ್ಮ ಸರ್ಕಾರದವರ ಕರ್ತವ್ಯವಾಗಿದೆ. ಈ ಬಗ್ಗೆ ಈ ಸಭೆಯ ಮಾನ್ಯ ಸದಸ್ಯರ ಸಂಪೂರ್ಣ ಬೆಂಬಲವಿದೆಯೆಂದು ನಾನು ಆಶ್ವಾಸನ ಕೊಡುತ್ತೇನೆ.

ಇನ್ನು ಈ ಬಜೆಟ್ಟಿನ ಕೆಲವು ಅಂಶಗಳ ಬಗ್ಗೆ ನಾನು ಹೆಚ್ಚಿಗೆ ಪ್ರಸ್ತಾಪಮಾಡುವುದಿಲ್ಲ. ಏಕೆಂದರೆ ಅನೇಕರು ಆಗಲೇ ಈ ಬಗ್ಗೆ ಚರ್ಚೆ ಮಾಡಿದ್ದಾರೆ. ಒಟ್ಟಿನಲ್ಲಿ ಈ ವರ್ಷ ಇಂಥಾ ಕಷ್ಟ ಸಮಯದಲ್ಲೂ ನಮ್ಮ ಎಲ್ಲಾ ಮುಖ್ಯ ಕೆಲಸಗಳಿಗೂ—ವಿದ್ಯಾಭ್ಯಾಸ ಹಾಗೂ ಅಗತ್ಯವಾದ ಪ್ರಾಜೆಕ್ಟುಗಳಿಗೂ—ಸಾಧ್ಯವಾದಷ್ಟು ಹಣ ಒದಗಿಸಿ ಈ ಬಜೆಟ್ಟನ್ನು ನಿಪುಣತೆಯಿಂದ ತಯಾರುಮಾಡಿದ್ದಕ್ಕಾಗಿ ನಾನು ನಮ್ಮ ಆರ್ಥಿಕ ಸಚಿವರಿಗೆ ನನ್ನ ಧನ್ಯವಾದಗಳನ್ನರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಶ್ರೀಮಾನ್ ನಾರಾಯಣರೆಡ್ಡಿಯವರು ಕ್ಷಾಮನಿವಾರಣಾ ಕಾರ್ಯಗಳ ವಿಷಯದಲ್ಲಿ ಬಹಳ ಕಟುವಾಗಿ ಟೀಕಿಸಿದ್ದಾರೆ. ನನಗೆ ಅವಕಾಶ ಕೊಟ್ಟರೆ ಸದಸ್ಯರ ಭಾಷಣಗಳಿಗೆ ಈಗಲೇ ಉತ್ತರರೂಪವಾಗಿ ಕೆಲವು ಮಾತುಗಳನ್ನಾಡಲಿಚ್ಛಿಸುತ್ತೇನೆ.

Sri K. HANUMANTHAIYA (Leader of the House).—Sir, it is better that the debate goes on with some liveliness. If the Ministers are not allowed to intervene in the debate, then tomorrow all the six Ministers will have to speak one after the other. That means they will have to take three to four hours for themselves. The House will get tired of hearing the Ministers continuously for such a long time. Therefore I suggest that the Finance Minister will finally reply to all points raised on the financial aspect. Regarding revenue, agriculture, forest and other matters, it is better that the respective Ministers intervene in the course of the debate in order to make the debate serve the real purpose for which it is meant. As I said, to reply to the points raised one or two days later would lose the point; and also the interest will flag. If the House so desires and if you agree Sir, that seems to me to be the better course of carrying on the Budget debate Sir, I might tell the Hon'ble Members that this is also the practice in the Parliament. There I have seen Ministers intervening in the debate. Of course, the final reply will be given by the Finance Minister.

Mr. SPEAKER.—If I agree to this suggestion the Hon'ble Ministers will not have as many opportunities to speak in this debate as they would like to have. Supposing I give each Minister a chance in the middle of the debate, he will not be entitled to have another chance at the end, because the Finance Minister will reply on his behalf and on behalf of his colleagues.

Sri K. HANUMANTHAIYA.—Sir, in the very nature of things it will not be possible for any Minister to answer every point that is raised in the course of the debate. It is only the main points they will deal with. Suppose there are some points which ought to be answered by a particular Minister and he has spoken before the point is raised, since it is a question of joint responsibility, the other Ministers will see that that point is answered.

Mr. SPEAKER.—Of course that was the practice so far. However, if the House has no objection I will adopt that procedure as suggested by the Hon'ble Leader of the House.

Sri K. HANUMANTHAIYA.—I may straight away say that if the House wants to listen to the Ministers for four or five hours continuously, I have no objection either. It is only to make this debate more lively and pointed that I suggested this procedure.

Sri Mulka GOVINDA REDDY (Chitaldrug).—This point may be decided after Janab Imam comes here, Sir.

ಶ್ರೀ ಎ. ವಿ. ನರಸಿಂಹರೆಡ್ಡಿಯವರು (ಬೆಂಗಳೂರು ದಕ್ಷಿಣ).—ಅವರು ಹೇಳಿರುವಂತೆ ಮಾಡುವುದರಲ್ಲಿ ಒಂದು ತೊಂದರೆಯಾಗುತ್ತದೆ. ಆ ಮೇಲೆ ಮಾತನಾಡುವ ಸದಸ್ಯರು ಯಾವ ಯಾವ ವಿಚಾರ ಮಾತನಾಡುತ್ತಾರೆಂಬುದನ್ನು ತಿಳಿಯದೆ ಮಂತ್ರಿಗಳು ಅವುಗಳಿಗೆಲ್ಲ ಉತ್ತರಕೊಡುವುದು ಹೇಗೆ?

Sri K. HANUMANTHAIYA—Sir, the Hon'ble Member should understand

what has been said and then speak. That point has been met.

So the Revenue Minister wishes to speak after the lunch hour.

ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು.—ಸಭಾಪತಿಗಳೆ, ನಿನ್ನೆಯಿಂದಲೂ ಇದುವರೆಗೆ ಬಡ್ಜೆಟ್ಟಿನ ವಿಚಾರದಲ್ಲಿ ಅನೇಕ ಜನರು ಬಹಳ ಮಾತನಾಡಿದುದರ ಮೇಲೆ ನನ್ನ ಮನಸ್ಸಿಗೆ ತೋರಿದಂತೆ ಒಂದೆರಡು ವಿಷಯಗಳನ್ನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಇದುವರೆಗೆ ಮಾತನಾಡಿದವರಲ್ಲಿ ಈ ಬಡ್ಜೆಟ್ಟನ್ನು ಸ್ವಾಗತಿಸಿದವರೂ ಇದ್ದಾರೆ, ಟೀಕೆ ಮಾಡಿ ವಿರೋಧಿಸಿದವರೂ ಕೆಲವರಿದ್ದಾರೆ. ಆದರೆ ಇವರು ಹೆಚ್ಚಾಗಿ ಇಂಗ್ಲಿಷ್‌ನಲ್ಲಿ ಮಾತನಾಡಿರುವುದರಿಂದ, ನನಗೆ ಇಂಗ್ಲಿಷ್ ಅಷ್ಟು ತಿಳಿಯದೇಯಿದ್ದರೂ, ನನಗೆ ತಿಳಿವಷ್ಟನ್ನು ನನ್ನ ಭಾಷೆಯಲ್ಲಿ ಹೇಳುತ್ತೇನೆ. ನಮ್ಮ ಸಂಸ್ಥಾನದಲ್ಲಿ ಈಗ ಹೊಸ ಸರ್ಕಾರ ಸ್ಥಾಪನೆಯಾಗಿದೆ. ಹಿಂದಿದ್ದ ತಾತ್ಕಾಲಿಕ ಸರ್ಕಾರ ಹೋಗಿ ಜವಾಬ್ದಾರಿಯುತವಾದ ಮತ್ತು ಅಧಿಕಾರಯುತವಾದ ಸರ್ಕಾರ ಬಂದು ಮೂರು ತಿಂಗಳಾಗಿದೆಯೆಂದು ಭಾವಿಸಬಹುದು. ಈ ಮೂರು ತಿಂಗಳ ಸರ್ಕಾರ ಮುಂದೆ ಈ ವರ್ಷಾಂತ್ಯದವರೆಗೂ ಯಾವ ರೀತಿಯ ಯೋಜನೆಯಿರಬೇಕೆಂಬುದನ್ನು ತೀರ್ಮಾನಮಾಡಿಕೊಂಡು, ದೇಶದ ಆಗುಹೋಗುಗಳನ್ನೆಲ್ಲಾ ಯೋಚನೆ ಮಾಡಿಕೊಂಡು, ಆಯವ್ಯಯವನ್ನು ಸರಿತೂಗಿಸಿ ಈ ಬಡ್ಜೆಟ್ಟನ್ನು ತಯಾರಿಸಿದ್ದಾರೆ. ಹಣವಿಲ್ಲದಿರುವ ಇಂತಹ ಕಾಲದಲ್ಲಿ ಮಾನ್ಯ ಮಂತ್ರಿಗಳು ಈ ಬಡ್ಜೆಟ್ಟನ್ನು ರಚನೆ ಮಾಡಿರುವುದೆಂದರೆ, ನಿಜವಾಗಿಯೂ ಪ್ರಶಂಸನೀಯವಾಗಿದೆಯೆಂದು ಯಾರಾದರೂ ಒಪ್ಪಿಕೊಳ್ಳುವುದು ನ್ಯಾಯ. ಹಣ ಬೇಕಾದಷ್ಟಿದ್ದರೆ, ಇನ್ನೂ ಹೆಚ್ಚು ಹೆಚ್ಚು ಹಣವನ್ನೊದಗಿಸಿ, ನಾನಾ ಬಾಬುಗಳಿಗೆ ಹಾಕಿ, ಜನರೆಲ್ಲ ಹೊಗಳುವ ಬಡ್ಜೆಟ್ಟನ್ನು ಮಾಡಬಹುದು, ಅದು ಸುಲಭ. ಹಣವಿಲ್ಲದಿರುವ ಕಾಲದಲ್ಲಿ ಅಚ್ಚುಕಟ್ಟಾಗಿ ನಡೆಯುವ ವ್ಯವಸ್ಥೆಯನ್ನು ಮಾಡಿದ್ದಾರೆ. ಇದಕ್ಕಾಗಿ ನಾವು ಸಂತೋಷಪಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ. ಈ ಸಭೆಯಲ್ಲಿ ಇದಕ್ಕೆ ವಿರೋಧಭಾವವನ್ನು ಸೂಚಿಸುವ ಜನರಲ್ಲಿ ಮುಖ್ಯವಾಗಿ ಒಂದು ಮಾತು ಹೇಳಬೇಕಾಗಿದೆ. ನಾವು ಏಕೆ ಇಲ್ಲಿ ಬಂದಿದ್ದೇವೆಂಬುದನ್ನು ಯೋಚನೆಮಾಡಬೇಕು. ನಲವತ್ತು ಐವತ್ತು ಲಕ್ಷ ಜನರಿಂದ ಓಟು ಪಡೆದು ಚುನಾಯಿತರಾಗಿ ಇಲ್ಲಿ ಬಂದಿದ್ದೇವೆ: ನಮ್ಮ ಮೇಲೆ ಬಹಳ ದೊಡ್ಡ ಜವಾಬ್ದಾರಿಯಿದೆ. ವಿರೋಧಪಕ್ಷವೇ ಆಗಲಿ ನಾವೇ ಆಗಲಿ, ನಮ್ಮ ಉದ್ದೇಶವೇನಿರಬೇಕು, ನಮ್ಮಿಂದ ಜನರು ಏನು ನಿರೀಕ್ಷಣೆ ಮಾಡುತ್ತಿದ್ದಾರೆ, ನಮ್ಮನ್ನು ಚುನಾಯಿಸಿ ಕಳುಹಿಸಿರುವ ಜನರಿಗೆ ನಾವು ಏನು ಉಪಕಾರ ಮಾಡಬೇಕು ಎಂಬುದನ್ನು ನೋಡಬೇಕು; ಬರಿಯ ವಿರೋಧ ಮಾಡುವುದಲ್ಲ, ನಮ್ಮ ದೇಶದ ಆವಶ್ಯಕತೆಗಳೇನು ಎಂಬುದನ್ನು ತಿಳಿದು, ನಾವು ಹೊಸದಾಗಿ ಒಂದು ಮನೆಯನ್ನು ರಚನೆಮಾಡಿಕೊಳ್ಳಬೇಕಾಗಿದೆ. ಮನೆಯ ರಚನೆ ಸಾಮಾನ್ಯವಾಗಿ ಹೆಣ್ಣುಮಕ್ಕಳಿಗೆ ಅನ್ವಯಿಸತಕ್ಕದ್ದು. ನಮ್ಮ ದೇಶ ನಮ್ಮ ಮನೆಯೆಂದು ಭಾವಿಸೋಣ. ಈ ಮನೆಯನ್ನು ಕಟ್ಟಬೇಕಾದರೆ ಒಂದು ಯೋಜನೆ ಬೇಕು, ಎಲ್ಲರ ಸಹಾಯವೂ ಬೇಕು. ಬಡವರು, ಬಲ್ಲಿದರು, ಎಲ್ಲರ ಸಹಾಯವೂ ಬೇಕು. ಇದರಂತೆಯೇ ಅಡಿಗೆಮನೆಯನ್ನು ಕಟ್ಟುವುದಕ್ಕೆ ನಮ್ಮ ಹೆಣ್ಣುಮಕ್ಕಳ ಸಹಾಯ ಬೇಕು. ಇವರ ಸಹಾಯವನ್ನು ತೆಗೆದುಕೊಳ್ಳದಿದ್ದರೆ, ಪ್ರಾಮುಖ್ಯವಾದ ಅಡಿಗೆಮನೆ ಸರಿಯಾಗಿ ಆಗದೆ, ಹೊತ್ತಿಗೆ ಸರಿಯಾಗಿ ಅಡಿಗೆಯಾಗದೆ ಯಾವಾಗಲೂ ತೊಂದರೆಪಡಬೇಕಾಗುತ್ತದೆ. ಕಟ್ಟಡವೆಲ್ಲ ಸರಿಹೋಗುವ ದೃಷ್ಟಿಯಿಂದ ನಾವು ಯೋಚನೆಮಾಡಿದರೆ, ಇಷ್ಟಕ್ಕಾದರೂ ನಮ್ಮ ಹೆಣ್ಣುಮಕ್ಕಳ ಅನುಭವ ಬೇಕಾಗುತ್ತದೆ. ಈಗಲಾದರೂ ಸರಿಸಮಾನವಾದ ಅಧಿಕಾರ ಹೆಣ್ಣುಮಕ್ಕಳಿಗೆ ಕೊಡಬೇಕು. ಹಿಂದಿನ ಚರಿತ್ರೆಯಲ್ಲಿ ನೋಡಿದರೆ ಇದನ್ನು ಕೊಟ್ಟಿರುವುದು ಕಾಣುತ್ತದೆ; ಆದರೆ ಈಗ ಅದು ಉಳಿದಿಲ್ಲ. ನಾವು ಸರಿಸಮಾನ ಅಧಿಕಾರವನ್ನು ಬೇಡಿದೆವೋ, ಇಲ್ಲದಿದ್ದರೆ ನಿಮಗೇ ಕೊಡಬೇಕೆಂಬ ಇಚ್ಛೆ ಹುಟ್ಟಿತೋ ನನಗೆ ಗೊತ್ತಿಲ್ಲ—ಅಂತೂ ಅದು ನಮಗೆ ಬಂದಿದೆ. ಬಲಾತ್ಕಾರ ಬರುವುದಕ್ಕಿಂತ ಮುಂಚೆಯೇ ಎಚ್ಚೆತ್ತುಕೊಂಡು ರಾಜಕೀಯದಲ್ಲಿ ಮುಂದುವರಿಯಬೇಕು. ಒಂದು ಮನೆಯ ಉಪಮಾನವನ್ನು ತೆಗೆದುಕೊಂಡರೆ, ಮನೆಯ ಯಜಮಾನರು ಸರ್ಕಾರ ಎಂದು ಭಾವಿಸೋಣ. ಸರ್ಕಾರದ ಆಡಳಿತಕ್ಕೊಳಪಟ್ಟಿರುವವರು ಪ್ರಜೆಗಳು, ಒಂದು ಮನೆಯಲ್ಲಿ ಒಬ್ಬ ಮಗ ದುಡಿದು ಸಂಪಾದನೆಮಾಡುವುದಕ್ಕೆ ಹೋಗಬೇಕಾಗುತ್ತದೆ; ಮತ್ತೊಬ್ಬ ದಡ್ಡನಾಗಿದ್ದರೆ, ಹೊಲ ಮಾಡುವುದಕ್ಕೆ ಹೋಗುತ್ತಾನೆ; ತಮ್ಮಂಥ ಮೇಧಾಶಕ್ತಿಯುಳ್ಳವರು ವ್ಯಾಸಂಗಮಾಡಿ ಲಾಯರಾಗಿ ಕೋರ್ಟು ಕಛೇರಿಗಳಿಗೆ ಹೋಗುತ್ತಾರೆ; ಹೆಣ್ಣುಮಕ್ಕಳು ತಮ್ಮ ತಮ್ಮ ಕೆಲಸಗಳೇನೆಂಬುದನ್ನು ತಿಳಿದು ಬೇರೆ ಬೇರೆ ಭಾಗವಾಗಿ ವಿಂಗಡಿಸಿಕೊಂಡು, ಒಟ್ಟಿನಲ್ಲಿ ಎಲ್ಲರೂ ಸೇರಿ ಸಂಸಾರದ ಕೆಲಸ ನಡೆಸಬೇಕಾಗುತ್ತದೆ. ಹೀಗೆ ಮಾಡುವಾಗ ಮನೆಯಲ್ಲಿ ಒಬ್ಬ ಸೋಮಾರಿ ಹುಡುಗ ಇರುತ್ತಾನೆ; ಅವನಿಗೆ ಯಾವ ಕೆಲಸವೂ ಇರುವುದಿಲ್ಲ. ಬಾಯಿ ಜಾಸ್ತಿಮಾಡಿಕೊಂಡು ಇದ್ದುದನ್ನು ಕಸಿದುಕೊಂಡು ತಿನ್ನುತ್ತಿರುತ್ತಾನೆ. "ಇಂಥವರಿಗೆ ಏನು ಕೆಲಸ ಕೊಟ್ಟಿದ್ದೀರಿ? ನಮ್ಮ ದೇಶದಲ್ಲಿ ಇಂಥವರಿದ್ದಾರೆ! ಇವರಿಗೆ ನಿರುದ್ಯೋಗವನ್ನು ಹೋಗಲಾಡಿಸುವುದಕ್ಕೆ ನೀವು ಮೊದಲು ತಕ್ಕ ಕೆಲಸವನ್ನು ಕೊಟ್ಟು, ಅವರು ಆ ಕೆಲಸ ಮಾಡಲೇಬೇಕೆಂದು ಗೊತ್ತುಮಾಡಬೇಕು. ಕಾನೂನಿನ ಪ್ರಕಾರ ಯಾವ ಮನುಷ್ಯನೂ ಕೆಲಸಮಾಡದೇ ಅನ್ನ ತಿನ್ನಬಾರದೆಂದು ಗೊತ್ತುಮಾಡಬೇಕು. ಭೂಮಿ ಉಳುವುದು, ಬೆಳೆಯುವುದು, ಕೆರೆ ಕಟ್ಟುವುದು ಇಂತಹ ದೇಶಾಭಿವೃದ್ಧಿ ಕಾರ್ಯಗಳಲ್ಲಿ ಇವರಿಗೆ ಕೆಲಸವನ್ನು ನಿಗದಿಮಾಡಿ ಇವರನ್ನು ನೇಮಿಸಬೇಕು. ಅನೇಕ ಗಂಡಸರು ನಿರುದ್ಯೋಗಿಗಳಾಗಿ ನಮ್ಮ ದೇಶ ಹಾಳಾಗುತ್ತಿದೆ. ಒಬ್ಬ ಸಂಪಾದನೆ ಮಾಡಬೇಕು, ಹತ್ತುಮಂದಿ ತಿನ್ನಬೇಕು, ಹೀಗಿದೆ ನಮ್ಮ ಸಮಾಜದ ಸ್ಥಿತಿ. ಇದು ತಪ್ಪಬೇಕು. ಹೆಂಗಸರಿಗೂ ಕೂಡ ಕೆಲಸವಿರಬೇಕು. ಇವರಿಗೆ ಗ್ರಾಮಕೈಗಾರಿಕೆಗಳಲ್ಲಿ ಕೆಲಸ ಕೊಡಬೇಕು. ಈ ವಿಷಯದಲ್ಲಿ ಈ ಬಡ್ಜೆಟ್ಟಿನಲ್ಲಿ ಹಣ ಕಡಮೆಯಾಗಿದೆ. ಇದಕ್ಕೆ ಹಣ ಒದಗಿಸಿ ಅವಕಾಶಮಾಡಿಕೊಡಬೇಕು. ಹೆಂಗಸರಿಗೆ ಹೆಚ್ಚು ಕೆಲಸ ಕಾರ್ಯಗಳನ್ನೊದಗಿಸಬೇಕು. ಮನೆಯಲ್ಲೇ ಕೆಲಸಮಾಡಿಕೊಳ್ಳುವಂತೆ ಗೃಹಕೈಗಾರಿಕೆಗಳಿಗೆ ಅವಕಾಶವಿರಬೇಕು. ಇವರಲ್ಲಿ ವ್ಯಾಸಂಗಮಾಡಿ ವಿದ್ಯಾವಂತರಾಗಿ ಬಂದರೆ ಅಂಥವರಿಗೆ, ಒಂದುವೇಳೆ ಗಂಡಸರಿಗಿಲ್ಲದಿದ್ದರೂ, ಇವರು ಯಾವ ಕೆಲಸ ಮಾಡಲು ಯೋಗ್ಯರೋ ಆ ಕೆಲಸವನ್ನು ಕೊಡಬೇಕು. ಕಾಲೇಜು ಸ್ಕೂಲುಗಳಲ್ಲಿರುವ ಕೆಲಸಗಳನ್ನು ಹೆಂಗಸರಿಗೇ ಮೀಸಲಾಗಿಟ್ಟು ಕೊಡಬೇಕು. ಬೇರೆ ಕೆಲಸಗಳನ್ನು ಕಾಯಶಕ್ತಿಯಿಂದ ಮಾಡುವುದು ಹೆಂಗಸರಿಗೆ ಸಾಧ್ಯವಿಲ್ಲ. ಆದಕಾರಣ ಇಂತಹ ಕೆಲಸಗಳನ್ನು ಹೆಂಗಸರಿಗೆ ಕೊಡಬೇಕು. ಹೀಗೆ ಮಾಡಿದರೆ ದೇಶದ ಜೀವನ ಸುಧಾರಿಸುತ್ತದೆ. ಇಲ್ಲದಿದ್ದರೆ ಬರಿಯ ಮಾತಿನಲ್ಲಿ "ಯತ್ರಪೂಜ್ಯಂತೆ......" ಎಂದು ಹೇಳುವುದನ್ನು ಕಾರ್ಯದಲ್ಲಿ ತೋರಿಸದಿದ್ದರೆ ಪ್ರಯೋಜನವಿಲ್ಲ. ಕಾರ್ಯದಲ್ಲಿಯೂ ತೋರಿಸಬೇಕು.

(ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು.)

ಹೀಗಾದರೆ ಯಾವ ಒಂದು ಸರ್ಕಾರವೂ ಒಂದು ವ್ಯವಸ್ಥಿತಿಗೆ ಬರುವುದಿಲ್ಲ; ನಾವು ಮುಂದಕ್ಕೆ ಬರುವುದಿಲ್ಲ; ದೇಶವೂ ಮುಂದೆ ಬರುವುದಿಲ್ಲವೆಂದು ನಾನು ಭಾವಿಸುತ್ತೇನೆ. ಹೆಂಗಸರಿಗೆ ನಾವು ಹೆಚ್ಚು ಹೆಚ್ಚಾಗಿ ಕೆಲಸಗಳನ್ನು ಕೊಡಬೇಕೆಂದು ಹೇಳುತ್ತಿರುವಾಗ ನಾವು ನಮ್ಮ ಬಡ್ಜೆಟ್ಟನ್ನು ಸ್ವಲ್ಪ ನೋಡೋಣ. ತಾವು ಎಷ್ಟೆಷ್ಟು ಸೌಕರ್ಯಗಳನ್ನು ಹೆಂಗಸರಿಗೆ ಒದಗಿಸಬೇಕಾಗಿತ್ತೋ ಅಷ್ಟಕ್ಕೆ ಸಾಕಾಗುವಷ್ಟನ್ನಾದರೂ ದುಡ್ಡಿನ ವ್ಯವಸ್ಥೆಯನ್ನು ಮಾಡಿಲ್ಲ ಎಂದು ಕಂಡು ಬರುತ್ತಿದೆ.

ಶ್ರೀ ಕೆ. ಹನುಮಂತಯ್ಯನವರು.—ಈಗ ಸರ್ಕಾರದವರು ಕೊಡತಕ್ಕ ಆರು ಕೋಟಿ ರೂಪಾಯಿಗಳ ಸಂಬಳ ಕೂಡ, ಅವರವರ ಮನೆಯ ಹೆಂಗಸರ ಕೈಗೇ ಹೋಗುತ್ತದೆ, ಸ್ವಾಮಿ. (Laughter).

ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು.—ಆ ದೃಷ್ಟಿಯಿಂದ ನಾನು ಹೇಳುವುದಾದರೆ, ನಾವೇನೂ ಹೆಚ್ಚಾಗಿ ಕೇಳುವುದಿಲ್ಲ, ಇದ್ದುದರಲ್ಲೇ ಕೇಳುತ್ತಿದ್ದೇವೆ; ಹೀಗೆ ಇದ್ದುದನ್ನೇ ಕೊಡದೆ ಇರತಕ್ಕವರು, ಇನ್ನು ಇಲ್ಲದಿದ್ದಾಗ, ಮುಂದೆ ತಾವು ಕೊಡುತ್ತೀರಾ? ಈಗ ಹೆಂಗಸರ ಪ್ರಾತಿನಿಧ್ಯವನ್ನೇ ತೆಗೆದುಕೊಳ್ಳೋಣ. ಒಂದೊಂದು ಜಿಲ್ಲೆಗೆ ಒಬ್ಬೊಬ್ಬ ಮಹಿಳೆಯರಿಗೆ ತಾವು ಅವಕಾಶ ಮಾಡಿಕೊಟ್ಟಿದ್ದರೆ ಈ ದಿವಸ 8 ಜಿಲ್ಲೆಗಳಿಂದ 8 ಜನ ಮಹಿಳೆಯರು ಬಂದು ಈ ಸಭೆಯಲ್ಲಿ ಕುಳಿತುಕೊಳ್ಳುತ್ತಿದ್ದರು. ಒಬ್ಬರು ಹೆಂಗಸರೂ ಸಹ ಈ ದಿವಸ ಮಂತ್ರಿಗಳಾಗಿರುತ್ತಿದ್ದರು. ಆದರೆ ಸಾಧಾರಣವಾಗಿ ಎಲ್ಲರೂ ಬಾಯಲ್ಲಿ ಹೆಂಗಸರೂ, ಗಂಡಸರೂ, ಎಲ್ಲರೂ ಒಂದೇ ಸರಿಸಮಾನದವರು ಎಂದು ಹೇಳುತ್ತಿದ್ದೀರಿ. ಹಾಗೆ ಅದನ್ನು ಬರಿ ಬಾಯಲ್ಲಿ ಹೇಳಿದರೆ ಎಲ್ಲರೂ ಸರಿಸಮನಾದಂತೆ ಆಗುವುದಿಲ್ಲ! ಆದರೆ ಅದು ಕಾರ್ಯರೂಪಕ್ಕೆ ಬರಲಿ ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಶಂಕರಲಿಂಗೇಗೌಡರು.— ಅವರಿಗೆ ತಾವು ಇನ್ನು ಮೇಲೆ ಓಟ್ ಕೊಡದಿದ್ದರಾಯಿತು : ಅಷ್ಟೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು.—ನಮ್ಮಲ್ಲಿ ಅರ್ಧ ಭಾಗಕ್ಕೆ ಹೆಚ್ಚಾಗಿ ಮಹಿಳಾ ಸದಸ್ಯರು ಯಾವಾಗ ಬರುತ್ತಾರೋ ಆಗ, ಹಾಗೂ ಆಗಬಹುದು. ಅಂಥ ಕಾಲವೂ ಬರಬಹುದು. ಈಗ ಒಂದು ಸಂಸಾರದಲ್ಲಿ ಹೆಣ್ಣು ಮಕ್ಕಳು ತಮ್ಮ ಸಂಸಾರದ ಬಡ್ಜೆಟ್ಟನ್ನು ಎಂದರೆ ಒಂದು ಸಂಸಾರಕ್ಕೆ ಬರತಕ್ಕ ಉತ್ಪತ್ತಿಯಲ್ಲಿ ಅವರು ಯಾವ ಬಾಬಿಗೆ ಎಷ್ಟೆಷ್ಟನ್ನು ವಿನಿಯೋಗವಾಡಬೇಕೆಂಬ ಬಗ್ಗೆ ಎಂದರೆ—ಮನೆಗೆ ಆಗತಕ್ಕ ದವಸ ಧಾನ್ಯಗಳಿಗೆ ಎಷ್ಟು ದುಡ್ಡಾಗಬೇಕು, ಆರೋಗ್ಯ ರಕ್ಷಣೆಗೆ ಎಷ್ಟು ದುಡ್ಡಾಗಬೇಕು, ಬಟ್ಟೆಬರಿಗಳಿಗೆ ಎಷ್ಟು ದುಡ್ಡಾಗಬೇಕು—ಹೀಗೆಲ್ಲಾ ಏನು ಒಂದು ಲೆಕ್ಕಾಚಾರ ಹಾಕಿಕೊಂಡು ಸಂಸಾರ ನಡೆಸುತ್ತಿದ್ದಾರೋ ತಾವೂ ಅದೇ ರೀತಿ ಈ ಸ್ಟೇಟ್ ಬಡ್ಜೆಟ್ಟನ್ನು ತಯಾರಿಸಿರುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ.

ನಾವೀಗ ವೈದ್ಯಕೀಯ ಬಾಬು ಒಂದನ್ನು ತೆಗೆದುಕೊಂಡು ನೋಡೋಣ. ಜನರ ಆರೋಗ್ಯ ದೃಷ್ಟಿಯಿಂದ ತಾವು ಈ ಬಾಬಿಗೆ ಹೆಚ್ಚು ಗಮನ ಕೊಡಬೇಕಾದುದೇ ಸರಿ. ಆದರೆ ಹೆಣ್ಣು ಮಕ್ಕಳ ಹೆರಿಗೆ ಕಾಲದ ಅವಶ್ಯಕತೆಗಳಿಗೆ ತಾವು ಎಷ್ಟು ಹೆಚ್ಚಿನ ಗಮನ ಕೊಡಬೇಕಾಗಿತ್ತೋ ಅಷ್ಟು ಗಮನ ಕೊಟ್ಟಿಲ್ಲ ಮತ್ತು ಇದಕ್ಕಾಗಿ ತಾವು ಸಾಕಷ್ಟು ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿಲ್ಲ. ಇನ್ನು ಸ್ಕೂಲುಗಳಲ್ಲಿ ವ್ಯಾಯಾಮಶಿಕ್ಷಣಕ್ಕಾಗಿ ಸಾಕಷ್ಟು ಹಣವನ್ನು ತಾವು ಒದಗಿಸಿಲ್ಲ; ಗ್ರಾಮಸುಧಾರಣೆಗೂ ಹಣ ಕೊಟ್ಟಿದ್ದೀರಿ; ಆದರೆ ಸಾಲದು. ಆದರೆ ಪ್ರೌಢ ಶಿಕ್ಷಣದ ಆವಶ್ಯಕತೆ ಅಷ್ಟಾಗಿ ಬೇಕಿಲ್ಲವೆಂದು ನಾನು ನನ್ನ ಅನುಭವದಿಂದ ಹೇಳುತ್ತೇನೆ. ಮೊನ್ನೆ ಗನ್ನಾಯ್ಕನ ಹಳ್ಳಿಗೂ ಕೆಲವು ಚಿತ್ರಪಟ ಇತ್ಯಾದಿಗಳನ್ನೆಲ್ಲಾ ತೆಗೆದುಕೊಂಡು ಬಂದು ಅಲ್ಲಿ ಪ್ರಚಾರಮಾಡುತ್ತಿದ್ದರು. ನಾನೂ ಸಹ ಅದನ್ನೆಲ್ಲಾ ನೋಡಿದೆ. ಆದರೆ ಅವರು ಏನು ಹೇಳುತ್ತಿದ್ದಾರೋ ಅದು ಅಕ್ಷರಶಃ ನಡೆಯುತ್ತಿಲ್ಲ. ಆದಕಾರಣ ಇದರ ಆವಶ್ಯಕತೆ ಸಹ ನಮಗೆ ಅಷ್ಟಾಗಿ ಇರುವುದಿಲ್ಲವೆಂದು ನನ್ನ ಅಭಿಪ್ರಾಯ.

ಹೆಂಗಸರಿಗೆ ತಾವು ಒದಗಿಸಿಕೊಡಬೇಕಾದ ಅನುಕೂಲಗಳು ಲಕ್ಷಗಟ್ಟಲೆ ಇವೆ. ಅವರ ಹೆರಿಗೆ ಕಾಲದ ಆವಶ್ಯಕತೆಗಳಿಗೆ, ಅವರ ಕುಶಲ ಕೈಗಾರಿಕೆಗಳಿಗೆ ಹೀಗೆ ನಾನಾ ರೀತಿಯಲ್ಲಿ ತಾವು ಅವರಿಗೆ ಪ್ರೋತ್ಸಾಹ ನೀಡಬೇಕಾಗಿದೆ. ಆದರೆ ತಾವು ಹೇಳಬಹುದು. ಲಕ್ಷಗಟ್ಟಲೆ ಖರ್ಚುಮಾಡಬೇಕಾದಂಥ ಆಸ್ಪತ್ರೆಗಳನ್ನು ಕಟ್ಟಿಸಿದ್ದೇವೆ. ಎಂದು. ಆದರೆ ಅಂಥ ದೊಡ್ಡ ಆಸ್ಪತ್ರೆಗಳಿರುವುದೆಲ್ಲಾ ಕೇವಲ ತಾವಿರುವ ಬೆಂಗಳೂರು ಒಂದರಲ್ಲಿ ಮಾತ್ರ. ಈ ಆಸ್ಪತ್ರೆಗೆ ತಾವು ಲಕ್ಷಗಟ್ಟಲೆ ಹಣವನ್ನು ಹಾಕಿದ್ದೀರಿ. ಆದರೆ ನಿಜವಾಗಿಯೂ ಈ ದಿವಸ ನಮ್ಮ ಈ ಲಕ್ಷಗಟ್ಟಲೆ ಹಣ ಹಾಕಿ ಕಟ್ಟಿರುವಂಥ ಆಸ್ಪತ್ರೆಗಳಿಂದ ಹಳ್ಳಿ ಹೆಂಗಸರಿಗೆ, ಕೂಲಿಯಿಂದ ಜೀವನಮಾಡತಕ್ಕ ಬಡ ಹೆಂಗಸರಿಗೆ, ಯಾವ ಸೇವೆಯೂ ಸಲ್ಲುತ್ತಿಲ್ಲ. ಮಾತೃ ಮಂದಿರಗಳನ್ನು ಈಗ ತಾವೇನೋ ಒಂಭತ್ತು ಜಿಲ್ಲೆಗಳಲ್ಲೂ ಒಂಭತ್ತನ್ನು ಏರ್ಪಾಡುಮಾಡಿದ್ದೀರಿ. ಆದರೆ ಇವು ಕೇವಲ ಮಾದರಿಗಾಗಿ ಇರಬಹುದು. ಈ ದಿವಸ ಕೇವಲ ಬಡಹಳ್ಳಿ ಹೆಂಗಸರಿಗೂ, ಕೂಲಿ ಕೆಲಸದಿಂದ ಜೀವನ ಮಾಡತಕ್ಕ ಸ್ತ್ರೀವರ್ಗಕ್ಕೂ ಈ ಮಾದರಿ ಮಾತೃ ಮಂದಿರಗಳಿಂದ ಏನೂ ಸಹಾಯವಾಗುತ್ತಿಲ್ಲ. ಆದುದರಿಂದ ನಾನು ಕೇಳುತ್ತಿರುವುದು, ಇಂಥ ಮಾತೃ ಮಂದಿರಗಳ ಆವಶ್ಯಕತೆ ಇದ್ದರೆ, ಇವುಗಳನ್ನು ಹೆಚ್ಚು ಮಾಡತಕ್ಕದ್ದು ಸೂಕ್ತವೆಂದು ಕಂಡು ಬಂದರೆ ತಾವು ಇವುಗಳನ್ನು ಜಾಸ್ತಿ ಮಾಡಿಕೊಡಿ. ಒಂಭತ್ತು ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲೂ ಇಂಥ ಒಂದೊಂದು ಮಾತೃ ಮಂದಿರವನ್ನು ಏರ್ಪಾಡು ಮಾಡಿ ತನ್ಮೂಲಕ ಬಡಹಳ್ಳಿ ಹೆಂಗಸರಿಗೆ ಸೇವೆ ದೊರೆಯುವಂತೆ ಮಾಡುತ್ತೀರೆಂದು ನಂಬಿದ್ದೇನೆ.

ಇನ್ನು ಕೈಗಾರಿಕೆ ವಿಚಾರ ತೆಗೆದುಕೊಳ್ಳೋಣ. ಯಾವಾಗಲೂ ಮನೆಯಲ್ಲಿರತಕ್ಕ ಹೆಂಗಸರಿಗೆ ಸಾಕಷ್ಟು ಕೆಲಸವಿಲ್ಲದೆ ಹೋದರೆ ಅವರಿಗೆ ಬುದ್ಧಿ ಕೆಡುವುದು ಸಹಜವಾಗಿಯೇ ಇದೆ.

ಒಬ್ಬ ಸದಸ್ಯರು.—ಈಗ ನೌಕರಿ ಇತ್ಯಾದಿಗಳನ್ನೆಲ್ಲಾ ಅವರಿಗೂ ಕೊಡಲಾಗುತ್ತಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು.—ನಿಜ. ಆದರೆ ಅವರು ಹಾಗೆ ಹೊರಗಡೆ ಬಂದು ಕೆಲಸ ಕಾರ್ಯಗಳನ್ನು ಮಾಡಲು ಇನ್ನೂ ಅವರಿಗೆ ಅರ್ಹತೆ ಸಾಲದು. ಇದಕ್ಕಾಗಿ ಒಂದು ಗಾದೆಯನ್ನೇ ಮಾಡಿದ್ದಾರೆ "ಹೆಂಗಸು ತಿರುಗಿ ಕೆಟ್ಟಳು, ಗಂಡಸು ಕೂತು ಕೆಟ್ಟ" ಎಂದು. ಆದುದರಿಂದ ನೀವು ಅವರು ಮನೆಯಲ್ಲೇ ಇದ್ದು ನಡೆಸುವಷ್ಟು ಕೆಲಸಗಳನ್ನೊದಗಿಸಿ ಕೊಟ್ಟರೆ ಸದ್ಯಕ್ಕೆ ಸಾಕು. ಗಂಡಸಾಗಿರುವವರು ಹೊರಗಡೆ ತಿರುಗಿ ಸಂಪಾದನೆ ತಂದು ಸಂಸಾರಗಳನ್ನು ಉದ್ಧಾರ ಮಾಡುತ್ತಿರುವುದೇ ಸಾಕು—ಇವರು ಇನ್ನೆಷ್ಟುಮಟ್ಟಿಗೆ ಹಾಗೆ ಹೊರಗಡೆ ದುಡಿದು ಸಂಸಾರ ಉದ್ಧಾರಮಾಡಬಲ್ಲರು? ಇವರಿಗೆ ಅಷ್ಟು ಚೈತನ್ಯವಿನ್ನೂ ಬಂದಿಲ್ಲ. ಆದುದರಿಂದ ಸದ್ಯದಲ್ಲಿ ಮೈಗೆ ಸರಿಯಾದ ಬಟ್ಟೆ, ಹೊಟ್ಟೆಗೆ ಸಾಕಷ್ಟು ಅನ್ನ, ತಲೆಗಿಷ್ಟು ಸರಿಯಾದ ಬುದ್ಧಿ,

ಇಷ್ಟನ್ನು ತಾವು ಪ್ರತಿಯೊಬ್ಬರಿಗೂ ಒದಗಿಸಿದರೆ ಸಾಕು. ದೇಶದ ಜನತೆಯು ಮುಂಥೆ ಹಿಂಥೆ ನಾವುಗಳೆಲ್ಲರೂ ಏನೇನು ಹೇಳುತ್ತಿದ್ದೆವು ಎಂಬುದನ್ನು ಇಂದು ಸ್ಮರಣೆಗೆ ತಂದುಕೊಂಡು ತಾವೀದಿವಸ ದೇಶದ ಆಡಳಿತ ನಡೆಸಬೇಕಾಗಿದೆ.

ಹೆಂಗಸರು ಬರಿ ಬುದ್ಧಿವಂತರಾದರೇ ಸಾಲದು. ಅವರ ನೈತಿಕ ಮಟ್ಟವನ್ನು ಹೆಚ್ಚಿಸಬೇಕಾದರೆ ಅವರಿಗೆ ಹೆಚ್ಚುಹೆಚ್ಚು ಕೆಲಸಗಳನ್ನು ಕೊಟ್ಟು ಅವರಿಗೆ ಸ್ವತಂತ್ರವಾಗಿ ದುಡಿಯುವ ಥ ಶಕ್ತಿ ಬರುವಂತೆ ಮಾಡಬೇಕು. ಹಾಗೆ ಯಾವಾಗ ನಾವು ಅವರಿಗೆ ತಕ್ಕಷ್ಟು ಕೆಲಸಗಳನ್ನು ಒದಗಿಸುವುದಿಲ್ಲವೋ ಆಗ ಅವರ ಬುದ್ಧಿ ಕೆಡಲು ಮಾರ್ಗವಾಗುತ್ತದೆ. ಹಾಗೆ ನಾವು ಅವರಿಗೆ ಒಂದು ಸನ್ಮಾರ್ಗದಲ್ಲಿ ನಡೆಯುವ ಅವಕಾಶ ಕಲ್ಪಿಸಿಕೊಡದೆ, ಅವರೇನಾದರೂ ಅನೀತಿಯುತರಾದರೆ ಆಗ ನೀವು ಅವರಕಡೆ ಕೈಎತ್ತಿ ತೋರಿಸಲು ಯತ್ನಿಸುತ್ತೀರಿ. ಆದುದರಿಂದ ತಾವು ಒಂದು ಸರಿಯಾದ ಯೋಜನೆಯನ್ನು ಹಾಕಿ, ಅವರಿಗೆ ಹೆಣೆಯುವುದು, ಕಸೂತಿ ಮಾಡುವುದು, ನೆಯ್ಯುವುದು. ಇತ್ಯಾದಿ ಉದ್ಯೋಗಗಳನ್ನು ಕಲ್ಪಿಸಿ ಅವರಿಗೆ ಅನುಕೂಲಮಾಡಿಕೊಡಬೇಕೆಂದು ಕೋರುತ್ತೇನೆ.

ಇನ್ನು ಮೊನ್ನೆ 2—3 ಜನರು ನಮ್ಮ ದೇಶದಿಂದ ಪರದೇಶಕ್ಕೆ ಹೋಗಿ ಸಂಚಾರಮಾಡಿಕೊಂಡು ಬಂದರು. ನಮ್ಮ ಶ್ರೀಮಾನ್ ಎಚ್. ಸಿ. ದಾಸಪ್ಪನವರೂ ಹೋಗಿದ್ದರು. ಹಾಗೆ ಪರದೇಶ ಸಂಚಾರ ಮಾಡಿಕೊಂಡು ಬಂದವರು ನಮ್ಮ ದೇಶಕ್ಕೆ ಏನು ತಂದು ಕೊಟ್ಟರು ಎಂದು ನಾನು ಕೇಳುತ್ತೇನೆ ಹೀಗೆಲ್ಲಾ ಮಾಡುವುದಕ್ಕೆ ಬದಲಾಗಿ, ಕೈಗಾರಿಕಾ ವಿದ್ಯಗಳಲ್ಲಿ ಕುಶಲತೆ ಪಡೆದಿರುವ ಜಪಾನ್ ದೇಶಕ್ಕೆ ಇಲ್ಲಿಂದ ಯಾರನ್ನಾದರೂ ಒಬ್ಬರನ್ನು ಕಳುಹಿಸಿಕೊಡಿ, ಇಲ್ಲವೇ ಅಲ್ಲಿಂದ ಒಬ್ಬರನ್ನು ಇಲ್ಲಿಗೆ ಕರೆಸಿಕೊಂಡು, ಮನೆಗಳಲ್ಲಿ ಕೆಲಸವಿಲ್ಲದೆ ಕುಳಿತಿರುವಂಥ ಹೆಂಗಸರುಗಳಿಗೆ ಕೆಲಸವನ್ನೊದಗಿಸಿ; ಅವರಿಗೆ ಉತ್ಪನ್ನ ಮಾಡುವ ಶಕ್ತಿಯನ್ನು ಒದಗಿಸಿ. ಆಗ ಅವರು ಕೈಗಾರಿಕಾ ವಿದ್ಯೆಗಳಲ್ಲಿ ಮುಂದುವರಿಯುವುದೇ ಅಲ್ಲದೆ ಅವರು ತಯಾರಿಸಿದ ಸಾಮಾನುಗಳ ಮಾರಾಟದಿಂದ ಅವರ ಕೈಗೆ ದುಡ್ಡೂ ಬರುತ್ತದೆ, ಇತ್ತಲಾಗಿ ಸರ್ಕಾರಕ್ಕೆ ಸಾಕಷ್ಟು ಸುಂಕ—ತೆರಿಗೆಗಳಿಂದ ದುಡ್ಡು ಬಂದು ನಿಮಗೂ ಸಹಾಯವಾಗುತ್ತದೆ. ತಾವು ಈ ಏರ್ಪಾಡನ್ನು ಮಾಡದಿದ್ದರೆ ಅವರು ಅನೀತಿವಂತರಾಗಲು ಕಾರಣವಾಗುತ್ತದೆ. ಆಗ ನೀವೇ ಕೈ ಎತ್ತಿ ತೋರಿಸುತ್ತೀರಿ. ಇದನ್ನೆಲ್ಲಾ ನೀವು ಸ್ವಲ್ಪ ಆಲೋಚನೆ ಮಾಡಿನೋಡಿರಿ. ಹೆಂಗಸು ಏತಕ್ಕೆ ಕೆಡುತ್ತಾಳೆ, ಏತಕ್ಕೆ ಅನೀತಿವಂತೆ ಆಗುತ್ತಾಳೆ, ಎಂದರೆ, ಅವಳಿಗೆ ಯಾವಾಗ ಒಂದು ನ್ಯಾಯವಾದ ಮಾರ್ಗದಲ್ಲಿ ಸರಿಯಾದ ದುಡಿಮೆ ಮಾಡಲು ಕೆಲಸಕಾರ್ಯಗಳಿರುವುದಿಲ್ಲವೋ ಆಗ ಅವಳು ಧೈರ್ಯಗುಂದಿ, ದಿಕ್ಕುತಪ್ಪಿ, ದಾರಿ ತಪ್ಪಿ ಹೋಗುತ್ತಾಳೆ. ಇಂಥ ಸಂದರ್ಭಗಳುಂಟಾಗದಿರುವಂತೆ ಮಾಡಬೇಕೆಂಬ ಒಂದು ಘನೋದ್ದೇಶಕ್ಕಾಗಿ ತಾವು ಬಡ್ಜೆಟ್ಟನಲ್ಲಿ ಈ ಬಾಬಿಗೆ ಹೆಚ್ಚು ಹಣ ಒದಗಿಸಬೇಕಾಗಿದೆ. ಅವರಿಗೆ ಸಣ್ಣ ಸಣ್ಣ ಕೈಗಾರಿಕೆಗಳನ್ನೂ, ಗೃಹ ಕೈಗಾರಿಕೆಗಳನ್ನೂ ಏರ್ಪಡಿಸಿಕೊಟ್ಟು, ಅವರ ಜೀವನೋಪಾಯಕ್ಕೆ ದಾರಿಮಾಡಿ, ಅವರನ್ನು ಕಾಪಾಡಿ. ಹೆಂಗಸಿಗೆ ಯಾವಾಗ ನೀತಿಯಿರುವುದಿಲ್ಲವೋ, ಆಗ ಆಕೆ ಇರತಕ್ಕ ಮನೆ ಬೆಳೆಯುವುದಿಲ್ಲ, ಆ ದೇಶಕ್ಕೂ ಒಳ್ಳೆಯದಾಗುವುದಿಲ್ಲ—ಇದನ್ನು ನಾನು ಕೈ ಎತ್ತಿ ಸಾರಿ ಸಾರಿ ಹೇಳುತ್ತೇನೆ. ತಾವು ಇದನ್ನು ಮರೆಯಬೇಡಿರೆಂದು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಮತ್ತೊಂದು ವಿಚಾರವೇನೆಂದರೆ. ಈ ಕಾಂಗ್ರೆಸ್ ಸರ್ಕಾರ ಬಂದ ಮೇಲೂ ಕೂಡ ಪ್ರಾಣಿವಧೆ ಇನ್ನೂ ನಿಂತಿಲ್ಲ. ಕುರಿಕೋಳಿಗಳನ್ನು ಇನ್ನೂ ಕಡಿಯುತ್ತಲೇ ಇದ್ದಾರೆ. ಇದಕ್ಕಾಗಿ ನಮ್ಮ ಸರ್ಕಾರ ಒಂದು ಕಾನೂನು ಮಾಡಿದೆ. ಆದರೂ ಅದು ಕಾರ್ಯತಃ ಜಾರಿಯಲ್ಲಿಲ್ಲ. ಸರ್ಕಾರ ಈ ವಿಚಾರವನ್ನು ಮರೆಯದಿರಲಿ. ಈಗ ಅನೇಕ ಕಡೆ ಜಾತ್ರೆಗಳಾಗುತ್ತಿವೆ. ಅಲ್ಲಿ ಅನೇಕ ಕಡೆ ಈಗಲೂ ಈ ಪ್ರಾಣಿವಧೆ ನಡೆಯುತ್ತಿದೆ. ಇಂಥ ಜಾತ್ರೆಗಳನ್ನು ನಡೆಸಬೇಕಾಗಿದ್ದರೆ ಲೈಸೆನ್ಸು ವಗೈರೆ ಪರ್ಮಿಷನ್ ಪಡೆದೇ ನಡೆಸಬೇಕಾಗಿದೆ! ಆದ್ದರಿಂದ ತಾವು ಇದನ್ನು ಕಡ್ಡಾಯವಾಗಿ ಸುಧಾರಣೆಮಾಡಬೇಕಾಗಿದೆ. ಗೋಮಾತೆಗೆ ನಾವು ಪೂಜ್ಯ ಸ್ಥಾನ ಕೊಟ್ಟಿದ್ದೇವೆ, ಅದನ್ನು ದೇವರೆಂದು ಪೂಜಿಸುತ್ತಿದ್ದೇವೆ. ಅದರ ಹಾಲನ್ನು ಕುಡಿದು ನಾವು ವಂಶಪಾರಂಪರ್ಯವಾಗಿ ಬೆಳೆದುಕೊಂಡು ಬರುತ್ತಿದ್ದೇವೆ. ಆದರೆ ಇಂಥ ಗೋಮಾತೆಯನ್ನು ಕಡಿಯಕೂಡದೆಂದು ಏನಾದರೂ ಕಾನೂನಿದೆಯೋ? ಇದ್ದರೂ ಅದು ಜಾರಿಯಲ್ಲಿದೆಯೆ! ಈ ವಿಚಾರಗಳನ್ನೆಲ್ಲಾ ತಾವು ಗಮನಕ್ಕೆ ತೆಗೆದುಕೊಂಡು ಸೂಕ್ತ ರೀತಿಯಲ್ಲಿ ಇದನ್ನು ಕ್ರಮಪಡಿಸಬೇಕೆಂದು ಪ್ರಾರ್ಥಿಸುತ್ತೇನೆ. ಇಂಥ ಪುಣ್ಯದ ಕೆಲಸವನ್ನು ಮಾಡಿದರೆ ದೇಶಕ್ಕೂ ಒಳ್ಳೆಯದಾಗುತ್ತದೆ; ನಮ್ಮ ಹೆಣ್ಣು ಮಕ್ಕಳೆಲ್ಲರೂ ತಮಗೆ ಅವರ ಸಂತೋಷ ಮತ್ತು ಧನ್ಯವಾದಗಳನ್ನು ಅರ್ಪಿಸುತ್ತಾರೆ. ನಿಮ್ಮ ಕರ್ತವ್ಯವನ್ನೂ ನೀವು ಪಾಲಿಸಿದಂತಾಗುತ್ತದೆ. ಈ ದೃಷ್ಟಿಯಿಂದ ಇದೆಲ್ಲವನ್ನು ನಾನು ತಮಗೆ ಹೇಳುತ್ತಿದ್ದೇನೆ.

ಇನ್ನು ದೇಶಕ್ಕೆ ಹಣದ ಉತ್ಪತ್ತಿ ಜಾಸ್ತಿಮಾಡಿಕೊಳ್ಳತಕ್ಕ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ಹೇಳಿರುವಂತೆ, ನಮ್ಮ ಇಡೀ ಸಂಸ್ಥಾನವನ್ನು 5 ಭಾಗಗಳನ್ನಾಗಿ ಮಾಡಿದರೆ ಆಗ ನಿಮಗೆ ಎಷ್ಟು ಖರ್ಚು ಉಳಿತಾಯವಾಗುತ್ತದೆ, ಆಲೋಚನೆ ಮಾಡಿರಿ.

ತಾವು ಈ ಬಸ್ ಲೈನುಗಳ ವಿಚಾರದಲ್ಲೂ ಕೂಡ ಒಂದು ನೀತಿಯನ್ನು ಹೊಸದಾಗಿ ಅನುಸರಿಸಿದರೆ ಒಳ್ಳೆಯದೆಂದು ತೋರುತ್ತದೆ. ಹಿಂದೆ ಹೇಗೆ ಸೇಂದಿ ಸಾರಾಯಿ ಇತ್ಯಾದಿ ಬಾಬುಗಳನ್ನೆಲ್ಲಾ ಹರಾಜುಹಾಕಲಾಗುತ್ತಿತ್ತೋ ಆ ಮಾದರಿಯಲ್ಲಿ ಈ ದಿವಸ ಈ ಬಸ್ ಲೈನುಗಳನ್ನೂ ತಾವು ಹರಾಜು ಮಾಡಿದ ಪಕ್ಷದಲ್ಲಿ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಆದಾಯ ಬರುತ್ತದೆ. ಈಗ ತಾವು ಹಾಕಿಕೊಂಡಿರುವ ಯೋಜನೆಯ ಪ್ರಕಾರ ಸಾಕಷ್ಟು ಉತ್ಪತ್ತಿ ಬಾರದೆ ಲುಕ್ಸಾನಾಗುತ್ತಿರುವುದರಿಂದ ನಾನೇ ಇದನ್ನು ಹೇಳಬೇಕಾಯಿತು. ಕರ್ಣಾಟಕ ದೇಶದಲ್ಲಿ ನಾನು ನಾನಾ ಭಾಗದಲ್ಲಿ ಸಂಚಾರ ಮಾಡಿನೋಡಿದ್ದೇನೆ. ಅಲ್ಲೆಲ್ಲಾ ಹೀಗೆಮಾಡಿದ್ದಾರೆ. ಅದರಂತೆಯೇ ನೀವು ಯುಕ್ತವಾದ ಬಾಬಿಗೆ ಹಣವನ್ನು ಖರ್ಚು ಮಾಡುತ್ತ, ಸೂಕ್ತವಲ್ಲದ ಬಾಬುಗಳಲ್ಲಿ ಖರ್ಚನ್ನು ತಗ್ಗಿಸುತ್ತ ಬರಬೇಕು. ಹೀಗೆಮಾಡಿದರೆ ನಿಮ್ಮ ಆರ್ಥಿಕ ಸ್ಥಿತಿ ಉತ್ತಮಗೊಂಡೀತು. ಹೀಗೊಂದು ತಾವು ಹೊಸ ಸುಧಾರಣೆಯನ್ನೇ ಮಾಡಬೇಕಾಗಿದೆ. ಇಂಥ ಉತ್ತಮ ಕಾರ್ಯಗಳನ್ನುಮಾಡಿ ತಾವು ಪ್ರಪಂಚಕ್ಕೇ ಒಂದು ಮಾದರಿಯಾಗಿ ಬಾಳಿ ಮಾರ್ಗದರ್ಶಕರಾಗಿ. ಈ ಒಂದು ಘನ ಉದ್ದೇಶಕ್ಕಾಗಿ ನಾವೆಲ್ಲರೂ ನಮ್ಮಲ್ಲಿರತಕ್ಕ ಭಿನ್ನಾಭಿಪ್ರಾಯಗಳನ್ನು ಬಿಟ್ಟು, ದೇಶಕ್ಕೆ ಒಳ್ಳೆಯದಾಗಬೇಕೆಂಬ ಒಂದೇ ಒಂದು ದೃಷ್ಟಿಯಿಂದ ನಮ್ಮ ಕೆಲಸಕಾ

(ಶ್ರೀಮತಿ ಬಳ್ಳಾರಿ ಸಿದ್ಧಮ್ಮನವರು.)

ರ್ಯಗಳನ್ನು ನಡೆಸಿಕೊಂಡು ಹೋದರೆ, ದೇಶದ ಜನ ನಮ್ಮಿಂದ ಏನೊಂದನ್ನು ಈ ದಿನ ನಿರೀಕ್ಷಣೆಮಾಡುತ್ತ ಕುಳಿತಿದೆಯೋ ಅದನ್ನು ದೊರಕಿಸಿಕೊಡಲು ಸಾಧ್ಯ. ಇಲ್ಲದ್ದರೆ ಎಲ್ಲವೂ ಕನಸು ನೆನಸಾದೀತು; ನಮ್ಮಗಳ ಕಷ್ಟ ಇನ್ನೂ ಹೆಚ್ಚಾದೀತು

ಕೊನೆಯದಾಗಿ, ಖಾದಿ ಪ್ರಚಾರದ ಬಗ್ಗೆ ಒಂದು ಮಾತನಾಡಬೇಕಾಗಿದೆ. ನಮ್ಮ ದೇಶದಲ್ಲಿ ಎರಡೋ ಒಂದೆರಡು ಖಾದೀ ಕೇಂದ್ರಗಳು ಮಾತ್ರ ಇವೆ. ಅವುಗಳ ಪೈಕಿ ಮೊನ್ನೆ ಒಂದನ್ನೇನೋ ಮುಚ್ಚಿದರೆಂಬ ವರ್ತಮಾನ ಕೇಳಿದೆ. ಆದರೆ ಕೈಮಗ್ಗದ ಕೈಗಾರಿಕೆಗೆ ಬಹಳ ಕಷ್ಟ ಬಂದಿವೆ. ಈ ರಾಕ್ಷಸೀ ಅವತಾರದ ಮೆಷಿನರಿಗಳು ಬಂದು ಉತ್ಪತ್ತಿ ಮಟ್ಟವನ್ನು ಅಳತೆ ಮೀರಿ ಹೆಚ್ಚಿಸಿ ಕೆಲಸ ನಡೆಸುತ್ತಿರುವಾಗ ಈ ಖಾದಿ ಕೈಗಾರಿಕೆ ಇನ್ನೆಲ್ಲಿ ನಿಲ್ಲಬೇಕು !

10–30 A. M.

ಅಂಥ ಬಾಬುಗಳನ್ನು ಕಾಪಾಡುವುದು, ಅವು ಚೆನ್ನಾಗಿ ಕೆಲಸಮಾಡುವುದಕ್ಕೆ ಸಹಾಯ ಕೊಡುವುದೂ ಸಹಜ. ಇದಕ್ಕಾಗಿಯೇ ಅಪದ್ಧನವೆಂಬ ನಿಧಿಯಿರುತ್ತದೆ, ಅಭಿವೃದ್ಧಿ ಕಾರ್ಯಗಳಿಗೆ ಪ್ರೋತ್ಸಾಹ ನೀಡಬೇಕು. ಹಾಗೆ ಮಾಡಿದರೆ ಕೈಗಾರಿಕೆ ವ್ಯವಸಾಯ ಮುಂತಾದುವೆಲ್ಲಾ ಬೆಳೆದು ದೇಶದ ಸ್ಥಿತಿಗತಿಯೂ ಚೆನ್ನಾಗಿರುತ್ತದೆ. ಆ ರೀತಿ ಮಾಡುವುದರಿಂದ ನಾವೆಲ್ಲಾ ಒಂದಾಗಿ ಒಂದುಗುರಿ ಮುಟ್ಟುತ್ತೇವೆಂಬ ಒಂದು ಆಸೆಯಿದ್ದೆ. ಇದೆಲ್ಲಾ ಆಗಬೇಕಾದರೆ ಯಾರು ಬಂದರೂ ಕೇಂದ್ರಕ್ಕೆ ಹೋಗಿ ಎಂದು ಹೇಳುವುದು ನಿಜ. ಆದರೆ ಕೇಂದ್ರ ಬೇರೆ ಅಲ್ಲ. ನಾವು ಬೇರೆ ಅಲ್ಲ. ನಾವೂ ಸಹ ಕೇಂದ್ರದಲ್ಲಿ ಸೇರಿದ್ದವರೇ. ಕೇಂದ್ರಕ್ಕೇ ಹೋಗಿ ಎಂದು ಹೇಳುವುದರಿಂದ ನಮ್ಮಲ್ಲಿ ಶಂಕೆಯುಂಟಾಗುತ್ತದೆ. ಪ್ರತ್ಯೇಕ ಭಾವನೆ ಬಂದರೆ ಒಗ್ಗಟ್ಟಾಗಲು ಸಾಧ್ಯವಿಲ್ಲ. ನಾವು ಐಕಮತ್ಯದಿಂದ ಒಳ್ಳೆಯ ಗುರಿಯನ್ನು ಮುಟ್ಟಲು ಪ್ರಯತ್ನಮಾಡಿದರೆ ಭಗವಂತನೂ ಸಹಾಯಮಾಡುತ್ತಾನೆ; ಒಂದು ವಿಧವಾದ ಸಂತೋಷವೂ ಉಂಟಾಗುತ್ತದೆ. ಹೆಂಗಸರೂ ಮುಂದೆ ಬರುವುದಕ್ಕೆ ಅವಕಾಶ ಕಲ್ಪಿಸಬೇಕು. ನಾನು ಅರಿಕೆಮಾಡಿ ಕೊಂಡಿರುವ ವಿಷಯಗಳಿಗೆ ಗಮನ ಇತ್ತು ಮುಂದಿನ ಬಡ್ಜೆಟನ್ನು ಸೂಕ್ತವಾಗಿ ಮಾರ್ಪಾಡು ಮಾಡಬೇಕು. ಈಗ ಬಡ್ಜೆಟ್ಟು ಇಂಗ್ಲೀಷು ಭಾಷೆಯಲ್ಲಿ ಮುದ್ರಣವಾಗಿರುವುದರಿಂದ ನನಗೆ ಅದರ ವಿಚಾರ ಸರಿಯಾಗಿ ತಿಳಿಯಲು ಅವಕಾಶವಾಗಲಿಲ್ಲ. ಆದ್ದರಿಂದ ಕನ್ನಡದಲ್ಲಿ ಅಚ್ಚು ಹಾಕಿಸಿ ಒದಗಿಸಬೇಕೆಂದು ಕೋರುತ್ತೇನೆ. ಭಾಷಾ ವಿಷಯ ಹಿಂದೆಯೇ ಅರಿಕೆ ಮಾಡಿದ್ದೇನೆ. ಇಷ್ಟನ್ನು ತಿಳಿಸಿ ಈ ಬಡ್ಜೆಟ್ಟನ್ನು ಸಮರ್ಥಿಸಿ ಎಲ್ಲರೂ ಅಂಗೀಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

The House rose for lunch at Thirty-two Minutes past Ten of the Clock and re-assembled at Two Minutes past Eleven of the Clock.

(MR. SPEAKER in the Chair)

ಶ್ರೀ ಕಡಿದಾಳ್ ಮಂಜಪ್ಪನವರು.—ಅಧ್ಯಕ್ಷರೇ, ಸರ್ಕಾರದವರು ಅಭಾವದ ಪ್ರದೇಶಗಳಲ್ಲಿ ಪರಿಹಾರದ ಬಗ್ಗೆ ಕೈಕೊಂಡಿರುವ ಕಾರ್ಯಕ್ರಮಗಳ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದಾರೆ ಅದರಲ್ಲೂ ಶ್ರೀಮಾನ್ ಬಿ. ವಿ. ನಾರಾಯಣರೆಡ್ಡಿಯವರು ಬಹಳ ಕಟುವಾಗಿ ಸರ್ಕಾರವನ್ನು ಟೀಕಿಸಿದ್ದಾರೆ. ಅವರ ಭಾಷಣವನ್ನು ಕೇಳಿ ನನಗಂತೂ ಬಹಳ ಆಶ್ಚರ್ಯವಾಯಿತು. ಈ ಅಭಾವ ಪ್ರದೇಶ ಎಂಬುದು ಬರಿಯ ಕೋಲಾರ ಜಿಲ್ಲೆಯಲ್ಲಿ ಮಾತ್ರ ಇಲ್ಲ. ತುಮಕೂರಿನ ಕೆಲವು ಭಾಗಗಳಲ್ಲಿ, ಚಿತ್ರದುರ್ಗದ ಕೆಲವು ಭಾಗಗಳಲ್ಲಿ ಮತ್ತು ಮಂಡ್ಯ ಜಿಲ್ಲೆಯ ಕೆಲವು ಭಾಗಗಳಲ್ಲಿ ಅಭಾವವಿದೆಯೆಂಬುದನ್ನು ನಾನು ಇಲ್ಲಿ ಹೇಳಬೇಕಾಗಿಲ್ಲ. ನಾವು ಆಡಳಿತವನ್ನು ವಹಿಸಿಕೊಂಡ ಹದಿನೈದು ದಿವಸಗಳವರೆಗೆ ಈ ಅಭಾವದ ಪ್ರದೇಶಗಳ ಸ್ಥಿತಿಗತಿ ಏನೆಂಬುದು ನಮಗೆ ಗೊತ್ತಾಗಿರಲಿಲ್ಲ. ಇದೇಕೆ ಹೇಳುವುದೆಂದರೆ, ಈ ವಿಚಾರದಲ್ಲಿ ಅನೇಕರು ಪ್ರಸ್ತಾಪ ಮಾಡಿದ್ದಾರೆ. ಹಿಂದೆ ಇದಿರಲಿಲ್ಲ. ನಾವು ಅಧಿಕಾರ ವಹಿಸಿಕೊಂಡ ನಂತರ ಈ ವಿಪತ್ತು ಕೋಲಾರ ಜಿಲ್ಲೆಯಲ್ಲಿ ಪ್ರಾರಂಭವಾಗಿ ಪ್ರಚಾರ ಶುರುವಾಯಿತು ! ಈಗೇನು ಪ್ರಚಾರ ಮಾಡುತ್ತಿದ್ದಾರೋ ಅದು ಹಿಂದೆ ಇಷ್ಟು ತೀವ್ರವಾಗಿರಲಿಲ್ಲ. ತಕ್ಷಣ ನಾವು ಪರಿಹಾರ ಕಾರ್ಯಕ್ರಮವನ್ನು ಕೈಕೊಂಡಿದ್ದೇವೆಂಬುದನ್ನು ಮಾನ್ಯ ಮಿತ್ರರಾದ ನಾರಾಯಣರೆಡ್ಡಿಯವರು ಒಪ್ಪಿಕೊಳ್ಳುತ್ತಾರೆಂದು ನಾನು ನಂಬುತ್ತೇನೆ.

ಸ್ವಾಮಿ, ಕಳೆದ ವರುಷ ಈ ಅಭಾವದ ಪ್ರದೇಶಗಳಿಗೆ ಈ ಕೆಳಗೆ ಕಂಡಂತೆ ಮೊಬಲಗನ್ನು ಸರ್ಕಾರದವರು ಖರ್ಚುಮಾಡಿದರು .—

		ರೂ.
ಕೋಲಾರ ಜಿಲ್ಲೆಗೆ	...	75,000 ಚಿಲ್ಲರೆ,
ಚಿತ ದುರ್ಗ ಜಿಲ್ಲೆಗೆ	...	15,000 ಸಾವಿರ
ತುಮಕೂರು	...	928

ಈ ವರ್ಷ ನಾವು ಮೊಬಲಗನ್ನು ಒದಗಿಸಿರುವುದು ಈ ರೀತಿಯಾಗಿದೆ, ಅನಂತರ ಅದನ್ನು ಪಾಸುಮಾಡಿದ್ದೇವೆ: ಕೋಲಾರ ಜಿಲ್ಲೆ ರಿಲೀಫ್ ಕಾಮಗಾರಿ ಬಗ್ಗೆ 4,95,000, ಹುಲ್ಲಿನ ಬಗ್ಗೆ 59,500 ಒಟ್ಟು 5,54,000 ಒದಗಿಸಿದೆ ; ತುಮಕೂರು ಜಿಲ್ಲೆ ರಿಲೀಫ್ ಕಾಮಗಾರಿಗಳಿಗೆ 1,05,000, ಹುಲ್ಲಿನ ಬಗ್ಗೆ 16,000, ಒಟ್ಟು 1,21,000 ಒದಗಿಸಲಾಗಿದೆ; ಚಿತ್ರದುರ್ಗ ಜಿಲ್ಲೆಗೆ ರಿಲೀಫ್ ಕಾಮಗಾರಿಗಳಿಗೆ 30,000, ಹುಲ್ಲಿನ ಬಗ್ಗೆ 16,500, ಒಟ್ಟು 46,500 ರೂಪಾಯಿಗಳನ್ನು ಒದಗಿಸಲಾಗಿದೆ; ಮಂಡ್ಯ ಜಿಲ್ಲೆಗೆ 2,03,000, ಮೈಸೂರು ಜಿಲ್ಲೆಗೆ 25,000, ಬೆಂಗಳೂರು ಜಿಲ್ಲೆಗೆ 20,000, ಹೀಗೆ ಒದಗಿಸಿದ್ದೂ ಅಲ್ಲದೆ ರೆಮಿಷನ್ ಮಾಡಿರುವುದು ಈ ರೀತಿ ಇದೆ.—

ಕೋಲಾರ ಜಿಲ್ಲೆಯಲ್ಲಿ 31,152 ರೂಪಾಯಿಗಳ ಕಂದಾಯ ಮಾಫಿ ಮಾಡಿದೆ. ಉಳಿದಿರುವುದನ್ನು ಪೋಸ್ಟ್‌ಪೋನ್ ಮಾಡಿದೆ. ಅದರಂತೆ ಪೋಸ್ಟ್‌ಪೋನ್ ಮಾಡಿರುವ ಕಂದಾಯವನ್ನು ರೆಮಿಷನ್ ಮಾಡಬೇಕೆ ಬೇಡವೆ ಎಂಬುದು ಸರ್ಕಾರದ ಪರ್ಯಾಲೋಚನೆಯಲ್ಲಿದೆ. ವಸೂಲು ಮಾಡಿರುವುದನ್ನು ವಾಪಸು ಕೊಡಬೇಕೆಂದು ಆರ್ಡರ್ ಮಾಡಿದೆ. ತುಮಕೂರು ಜಿಲ್ಲೆಯಲ್ಲಿ 2,14,000 ರೂಪಾಯಿಗಳನ್ನು ರೆಮಿಷನ್ ಕೊಟ್ಟು 2,22,000 ಚಿಲ್ಲರೆ ಸಸ್ಪೆಂಡ್ ಮಾಡಿದೆ. ಚಿತ್ರದುರ್ಗ

ಜಿಲ್ಲೆಯಲ್ಲಿ 35,200 ರೂಪಾಯಿಗಳನ್ನು ರೆಮಿಷನ್ ಮಾಡಿದೆ. ಕೋಲಾರದಲ್ಲಿ ಮಾಡಿರುವುದನ್ನು ಪ್ರತ್ಯೇಕ ವಾಗಿ ಹೇಳುವುದು ವಾಸಿ ಎಂದು ಭಾವಿಸುತ್ತೇನೆ. ಕೋಲಾರದಲ್ಲಿ ನಾನು ಆಗಲೇ ಹೇಳಿದ ಹಾಗೆ ರೆಮಿಷನ್ ಕೊಟ್ಟಿರುವುದೂ ಅಲ್ಲದೆ ಇದುವರೆಗೆ 6 ಲಕ್ಷ ರೂಪಾಯಿ ಗಳನ್ನು ರಿಲೀಫ್ ಕಾಮಗಾರಿಗಳಲ್ಲಿ ಭಾಗವಹಿಸಿದ ಕೂಲಿಗಳಿಗೆ ಕೂಲಿ ರೂಪದಲ್ಲಿ ಕೊಟ್ಟಿದೆ. 1,140 ಟನ್ ಹುಲ್ಲನ್ನು ಒದಗಿಸಿದ್ದೇವೆ. ಹುಲ್ಲಿನ ಬೆಲೆ ಸರ್ಕಾರಕ್ಕೆ ಟನ್ ಒಂದಕ್ಕೆ 125 ರೂಪಾಯಿ ಬೀಳುತ್ತದೆ. ನಾವು ಜನರಿಗೆ ಮಾರಾಟ ಮಾಡುವುದು ಟನ್ ಒಂದಕ್ಕೆ 46 ರೂಪಾಯಿ 10 ಆಣೆ 8 ಕಾಸಿನಂತೆ. ಇದಲ್ಲದೆ 2,600 ಚೀಲ ಗೋಧಿ ಹಿಟ್ಟನ್ನು ಕೋಲಾರ ಜಿಲ್ಲೆಗೆ ಒದಗಿಸಿದೆ. 12 ರೂಪಾಯಿಗಳಿಗೆ ಒಂದು ಚೀಲದಂತೆ ಅದರ ದರ ಇರುತ್ತದೆ. ಇದನ್ನು ಸಬ್‌ಸಿಡೈಸ್ಡ್ ದರದಲ್ಲಿ ಚೀಲಕ್ಕೆ 6 ರೂಪಾಯಿಗಳಂತೆ ಮಾರಾಟ ಮಾಡಿದೆ. ಆ ಮೇಲೆ 16,000 ಪೌಂಡ್ ಬ್ರೆಡ್ಡನ್ನು ಬಡ ಬಗ್ಗರಿಗೆ ಉಚಿತವಾಗಿ ಹಂಚಲಾಗಿದೆ. 19,000 ರೂಪಾಯಿಗ ಳನ್ನು ಬಡವರಿಗೆ ಅಂದರೆ ನಿರ್ಗತಿಕರಿಗೆ ಆಹಾರದವಸಗ ಳನ್ನು ಉಚಿತವಾಗಿ ಹಂಚುವುದಕ್ಕಾಗಿ ಖರ್ಚುಮಾಡಿದೆ. ರೆಡ್‌ಕ್ರಾಸ್ ಸೊಸೈಟಿಯವರು 9 ಕ್ಷೀರ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ. ಅದೇರೀತಿ ಕೋಲಾರ ಜಿಲ್ಲೆಗೆ ವಿಟಮಿನ್ ಟ್ಯಾಬ್ಲೆಟ್ಸ್ ಸುಮಾರು 10,000 ದ ವರೆಗೆ ಹಂಚಿದೆ. ಸುಮಾರು 15,000 ರೂಪಾಯಿಗಳನ್ನು ನಗದಾಗಿ ಕೈ ಕಾಲು, ಕಣ್ಣು ಇಲ್ಲದಿರುವವರಿಗೆ ಹಂಚುವುದಕ್ಕೆ ಖರ್ಚು ಮಾಡಿದೆ. ಜಮೀನು ಅಭಿವೃದ್ಧಿಯ ಸಾಲಕ್ಕಾಗಿ 2,30,000 ರೂಪಾಯಿಗಳನ್ನೂ, ತಕಾವಿ ಸಾಲಕ್ಕೆ 4,51,000 ರೂಪಾಯಿಗಳನ್ನೂ ಕೊಟ್ಟಿದೆ. ವೆಲ್ ಸಬ್ಸಿಡಿಗಾಗಿ 3 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಬೇರೆ ಜಿಲ್ಲೆಯವರು ಈ ಅಂಕಿ ಅಂಶಗಳನ್ನು ನೋಡಿ ನಾವು ಎಷ್ಟು ಪಕ್ಷಪಾತ ಮಾಡಿದ್ದೇವೆ ಎಂಬುದನ್ನು ತಿಳಿದು ಖಂಡಿಸುವುದಕ್ಕೆ ಇಷ್ಟು ಆಧಾರಗಳನ್ನು ಒದಗಿ ಸಿಕೊಟ್ಟಿದ್ದೇನೆ. ಬಾಯಿದ್ದವರು ಬರಗಾಲದಲ್ಲೂ ಬದುಕುತ್ತಾರೆ. ಎಂದು ಕನ್ನಡದಲ್ಲಿ ಒಂದು ಗಾದೆ ಹೇಳುತ್ತಾರೆ. ಕೋಲಾರ ಜಿಲ್ಲೆಯವರಿಗೆ ಸರ್ಕಾ ರದವರು ಕೊಟ್ಟಿರುವ ಹೋದ ವರ್ಷದ ಅಂಕಿ ಅಂಶಗ ಳನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಹೋದ ವರ್ಷ 75 ಸಾವಿರ ರೂಪಾಯಿ ಖರ್ಚು ಮಾಡಿದ್ದೇವೆ ಅಭಾ ವದ ಸಮಸ್ಯೆ ಈವತ್ತು ಉದ್ಭವಿಸಿದ ಸಮಸ್ಯೆ ಯಲ್ಲ. ಕಳೆದ 2—3 ವರ್ಷಗಳಿಂದ ಈ ಪ್ರಾಂತದಲ್ಲಿ ಮಳೆಯಾಗದೆ ಜನರು ಅಭಾವದ ಒಂದು ವ್ಯಾಕು ಲಕ್ಕೆ ಈಡಾಗಿದ್ದಾರೆ ಎಂಬುದನ್ನು ಮಾನ್ಯ ಮಿತ್ರರು ಚೆನ್ನಾಗಿ ತಿಳಿದುಕೊಳ್ಳಬೇಕು. ಶ್ರೀಮಾನ್ ನಾರಾಯಣ ರೆಡ್ಡಿಯವರು ರಾಯಲ್ ಸೀಮೆಯಲ್ಲಿ ಮದರಾಸು ಸರ್ಕಾರದವರು ಸ್ವರ್ಗ ಕಲ್ಪಿಸಿದ್ದಾರೆ ಎಂಬ ಅರ್ಥ ಬರುವ ರೀತಿಯಲ್ಲಿ ಭಾಷಣ ಮಾಡಿದರು. ಅಲ್ಲಿ ಯಾವರೀತಿ ಮಾಡಿದ್ದಾರೆ ಎಂಬುದು ಸರ್ಕಾರ ದವರ ಗಮನದಲ್ಲಿ ಇದೆ. ಆರೀತಿ ರಾಯಲ್ ಸೀಮೆ ಸ್ವರ್ಗವಾಗಿದ್ದಿದ್ದರೆ ಕೋಲಾರದ ಡಿಸ್ಟ್ರಿಕ್ಟ್‌ಗೆ ಜನರು ವಲಸೆ ಬರುತ್ತಾ ಇರಲಿಲ್ಲ. ಕೋಲಾರದ ಪ್ರಾಂತ ದಲ್ಲಿ ನಾನು ಸಂಚಾರ ಮಾಡುತ್ತಾ ಇದ್ದಾಗ ರಾಯಲ್ ಸೀಮೆಯಿಂದ ಜನರು ತಂಡೋಪತಂಡವಾಗಿ ಕೋಲಾ ರಕ್ಕೆ ಬರುತ್ತಾ ಇದ್ದರು. ಇಲ್ಲಿಗೆ ಏಕೆ ಬರುತ್ತಾರೆ ಎಂಬು ದನ್ನು ಯೋಚನೆ ಮಾಡಬೇಕು. ಕ್ಷಾಮ ಪ್ರದೇಶ ಎಂಬು ದಾಗಿ ಡಿಕ್ಲೇರ್ ಮಾಡಲಿಲ್ಲ ಎಂದು ಹೇಳಿದರು. ಫ್ಯಾಮಿನ್ ಕೋಡ್ ಎಂಬುದು ಓಬೀರಾಯನ ಕಾಲದ ಕಾನೂನು ಆಗಿದೆ. ಆ ಕಾನೂನಿನಲ್ಲಿ ಅಡಕವಾಗಿರುವ ಪ್ರೊಸೀಜರ್ ಅನುಸರಿಸಿದ್ದರೆ ಬಹುಶಃ ಇದುವರೆಗೂ ರಿಲೀಫ್ ಕಾಮಗಾರಿಗಳನ್ನು ಕೋಲಾರ ಜಿಲ್ಲೆಯಲ್ಲಿ ಪ್ರಾರಂಭಿಸುತ್ತಲೇ ಇರಲಿಲ್ಲ ಎಂದು ಹೇಳುತ್ತೇನೆ. ಕ್ಷಾಮ ಪ್ರದೇಶ ಎಂಬುದಾಗಿ ಡಿಕ್ಲೇರ್ ಮಾಡಿ ಏನೇನು ಮಾಡಬೇಕಾಗಿತ್ತೋ ಅದಕ್ಕಿಂತ ಜಾಸ್ತಿಯಾಗಿಯೇ ಮಾಡಿದ್ದೇವೆ ಎಂದು ಸ್ಪಷ್ಟಪಡಿಸುತ್ತೇನೆ. ಇಷ್ಟು ಮಾಡಿದರೂ ಸಹ ಒಂದು ಒಳ್ಳೆಯ ಮಾತೂ ಇಲ್ಲದಿದ್ದರೆ ನಮ್ಮ ಮನಸ್ಸಿನಲ್ಲಿ ಪರಿಣಾಮ ಏನಾಗುತ್ತದೆ ಎಂಬು ದನ್ನು ಶ್ರೀಮಾನ್ ರೆಡ್ಡಿಯವರು ಯೋಚನೆಮಾಡಬೇಕು!

ಶ್ರೀ ಬಿ. ವಿ. ನಾರಾಯಣರೆಡ್ಡಿಯವರು.—ನಾವೂ ಕಣ್ಣಾರೆ ನೋಡುತ್ತಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ನಿಜವಾಗಿಯೂ ಆ ಪ್ರಾಂತದಲ್ಲಿ ಕ್ಷಾಮ ಉಂಟಾಗಿತ್ತು. ಅದನ್ನು ತಪ್ಪಿ ಸಬೇಕಾದರೆ ಕರ್ತವ್ಯನಿರ್ವಹಿಸುವ ಅಧಿಕಾರವರ್ಗದವ ರಿಗೆ ಸ್ವಲ್ಪ ಶಹಬಾಸ್‌ಗಿರಿ ಕೊಟ್ಟು ಹೆಚ್ಚು ಕೆಲಸ ತೆಗೆಯುಕೊಳ್ಳುವುದಕ್ಕೆ ಪ್ರಯತ್ನಪಟ್ಟರೆ, ನಮಗೆ ಕೃತಜ್ಞತೆ ಯನ್ನು ಸಲ್ಲಿಸದಿದ್ದರೂ ಪರವಾಗಿಲ್ಲ, ತಮ್ಮ ಹಿತದೃಷ್ಟಿ ಯಿಂದಲೇ ಒಳ್ಳೆಯದು ಎಂದು ಹೇಳುತ್ತೇನೆ! ರೆವಿನ್ಯೂ ಇಲಾಖೆಯ ಡೆಪ್ಯುಟಿ ಕಮಿಷನರು ಅಮಲ್ದಾರರು, ಇವ ರೆಲ್ಲಾ ಎಷ್ಟೋ ಕಷ್ಟಪಟ್ಟಿದ್ದಾರೆ. ಆದ್ದರಿಂದ ಅವರಿಗೆ ಒಂದು ಒಳ್ಳೆಯ ಮಾತು ಇಂಥಾ ಸಂದರ್ಭದಲ್ಲಿ ಅಗತ್ಯ ಟೀಕೆ ಮಾಡಿ; ಟೀಕೆಯನ್ನು ಸ್ವಾಗತಿಸುತ್ತೇವೆ. ಆದರೆ ಯಾವ ಸಂದರ್ಭದಲ್ಲಿ ಟೀಕೆ ಮಾಡಬೇಕೋ ಆ ಸಂದರ್ಭ ದಲ್ಲಿ ಟೀಕೆ ಮಾಡಬೇಕೇ ಹೊರತು ದುಷ್ಪರಿಣಾಮ ವಾಗುವುದಾದರೆ ಅದರಿಂದ ದೇಶಕ್ಕೆ ಹಾನಿ ಎಂದು ಹೇಳುತ್ತೇನೆ.

ಬಾಕಿಕಡೆಗಳಲ್ಲೂ ಈ ಪರಿಹಾರ ಕಾರ್ಯ ನಡೆಸಿ ದ್ದೇವೆ. ಅದು ಏನು ಎಂಬುದನ್ನು ಸೂಕ್ಷ್ಮವಾಗಿ ಒಂದೆರಡು ಮಾತುಗಳಲ್ಲಿ ಹೇಳುತ್ತೇನೆ. ತುಮಕೂರು ಜಿಲ್ಲೆಯಲ್ಲಿ 2,14,176 ರೂಪಾಯಿಗಳ ರೆಮಿಷನ್ ಕೊಟ್ಟಿದೆ 2 ಲಕ್ಷ 24 ಸಾವಿರ ರೂಪಾಯಿ ಸಸ್ಪೆಂಡ್ ಮಾಡಿದ್ದೇವೆ. ತಾವು ಪ್ರಕೃತಿದೇವಿಯ ಕೋಪಕ್ಕೆ ತುತ್ತಾಗಿದ್ದಿರಿ. ಮೊನ್ನೆತಾನೆ ಶ್ರೀಮನ್ಮಹಾರಾಜ ರವರು ಹೇಳಿದಹಾಗೆ, ತಾವೂ ನಾವೂ ಕೂಡ ಎಲ್ಲರೂ ಭಗವಂತನನ್ನು ಪ್ರಾರ್ಥಿಸೋಣ. ಸರ್ಕಾರದವರ ಪ್ರಯತ್ನ ಎಷ್ಟು ಅಗತ್ಯವೋ ಸಾರ್ವಜನಿಕರ ಪ್ರಯತ್ನ ವೂಕೂಡ ಅಷ್ಟೇ ಅಗತ್ಯ ಎಂಬುದನ್ನು ತಮಲ್ಲಿ ಈ ಸಂದರ್ಭದಲ್ಲಿ ಅರಿಕೆಮಾಡಿಕೊಳ್ಳಬಯಸುತ್ತೇನೆ.

ಮಂಡ್ಯ ಜಿಲ್ಲೆಯವರು ಅಭಾವ ಪ್ರದೇಶದ ಜನರ ಸಹಾಯಕ್ಕೆ ಆಹಾರ ದವಸಗಳನ್ನು ಮತ್ತು ಹುಲ್ಲನ್ನು ಕೂಡ ಉಚಿತವಾಗಿ ಕೊಟ್ಟಿದ್ದಾರೆ. ಈ ಬಗ್ಗೆ ಸರ್ಕಾ ರದ ಪರವಾಗಿ ಮಂಡ್ಯ ಜಿಲ್ಲೆಯವರನ್ನು ವಂದಿಸು ವುದು ನನ್ನ ಕರ್ತವ್ಯ. ಇದೇ ಮಾತುಗಳನ್ನು ನನ್ನ ಮಿತ್ರರಾದ ಶ್ರೀಮಾನ್ ನಾರಾಯಣ ರೆಡ್ಡಿಯವರು ಹೇಳಿದ್ದರೆ ಚೆನ್ನಾಗಿತ್ತು ಎಂದು ಈ ಸಂದರ್ಭ ದಲ್ಲಿ ವಿನಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ. ನಮ್ಮಲ್ಲಿ ಉದಾರಿಗಳು ಬೇಕಾದಷ್ಟು ಜನ ಇದ್ದಾರೆ. ಮಲೆನಾಡಿನಲ್ಲಿ ನಾವೂ ತಾವೂ ಪ್ರಯತ್ನ ಪಟ್ಟರೆ ಬೇಕಾದಷ್ಟು ಆಹಾರ ದವಸವನ್ನು ಅಭಾವ ಪ್ರದೇಶ ಗಳಿಗೆ ಒದಗಿಸುವುದು ಸಾಧ್ಯ. ಇದೇ ರೀತಿ ಹುಲ್ಲನ್ನು ಕೂಡ ಒದಗಿಸುವುದು ಸಾಧ್ಯ. ಶ್ರೀಮಾನ್ ನಾರಾಯಣ ರೆಡ್ಡಿಯವರು ಒಂದು ಸಮಿತಿಯನ್ನು ರಚಿಸಿ ಆಹಾರ ದವಸ ಸಿಕ್ಕುವ ಪ್ರದೇಶಗಳಿಗೆ ಸಂಚಾರ ಹೊರಡಲು ಪ್ರಯತ್ನಪಟ್ಟರೆ ಬೇಕಾದಷ್ಟು ಆಹಾರ ದವಸ ಸಂಗ್ರ ಹಿಸಲು ಸಾಧ್ಯವಿದೆ ಎಂಬುದನ್ನು ಪುನಃ ಅರಿಕೆ ಮಾಡಿ ಕೊಳ್ಳುತ್ತೇನೆ. ನಮ್ಮ ಕೈಯಲ್ಲಿ ಸಾಧ್ಯವಾದದ್ದನ್ನು

(ಶ್ರೀ ಕಡಿದಾಳ್ ಮಂಜಪ್ಪನವರು.)

ಮಾಡುತ್ತೇವೆ. ನಾವಾಗಲಿ ತಾವಾಗಲಿ ಬರಿ ಭಾಷಣ ಮಾಡಿದರೆ ಅಭಾವ ಪ್ರದೇಶಗಳ ಪರಿಸ್ಥಿತಿ ಉತ್ತಮಗೊಳ್ಳುವುದಿಲ್ಲ ಎಂಬುದನ್ನು ಅರಿಕೆಮಾಡಿಕೊಳ್ಳುತ್ತೇನೆ. ಹೆಚ್ಚು ಹೇಳುವುದು ಅನಗತ್ಯವೆಂದು ಭಾವಿಸಿದ್ದೇನೆ. ಬಹುಶಃ ಕೋಲಾರ ಜಿಲ್ಲೆಗೆ ಇನ್ನೂ ಹೆಚ್ಚಿನ ಸಹಾಯ ದೊರೆಯಲಿ ಎಂಬ ಭಾವನೆಯಿಂದ ಉದ್ರೇಕ ಪೂರಿತವಾದ ಭಾಷಣ ಮಾಡಿದ್ದಾರೆ. ಅವರಿನ್ನೂ ಹೊಸಬರು ; ಆದ್ದರಿಂದ ಅವರ ವಿಚಾರದಲ್ಲಿ ಹೆಚ್ಚು ಪ್ರಾಶಸ್ತ್ಯಕೊಡುವುದು ಅನಗತ್ಯ ಎಂದು ಹೇಳುತ್ತೇನೆ.

ಇನ್ನೂ ಕೆಲವು ಮಾನ್ಯ ಸದಸ್ಯರು ಭೂಸುಧಾರಣೆಯ ವಿಚಾರ ಪ್ರಸ್ತಾಪಿಸಿ ಮಾತನಾಡಿದ್ದಾರೆ. ಒಂದು ಮಾತಿನಲ್ಲಿ ಹೇಳುವುದಾದರೆ ಸರ್ಕಾರದವರು ಭೂಸುಧಾರಣೆಯ ವಿಚಾರದಲ್ಲಿ ಇತರ ಯಾರಿಗೂ ಹಿಂದೆ ಇಲ್ಲ ಎಂದು ಹೇಳಿದರೆ ಸಾಕು. ಈ ಮಾನ್ಯ ಸಭೆ ಒಪ್ಪುವುದಾದರೆ ನಾವು ಕ್ರಾಂತಿಕಾರಕವಾದ ಸುಧಾರಣೆಯನ್ನು ತರಲಿಕ್ಕೂ ಕೂಡ ಸಿದ್ಧರಾಗಿದ್ದೇವೆ ಎಂದು ಹೇಳಿದರೆ ಸಾಕು ಎಂದು ಭಾವಿಸಿದ್ದೇನೆ.

ಆ ಮೇಲೆ ಇನಾಂ ಜಹಗೀರುಗಳನ್ನು ರದ್ದು ಮಾಡುವ ಬಿಲ್ಲನ್ನು ಏಕೆ ತರಲಿಲ್ಲ ಎಂದು ಕೆಲವರು ಪ್ರಶ್ನೆಮಾಡಿದ್ದಾರೆ. ಆ ಇನಾಂ ರದ್ದಿಯಾತಿ ಬಿಲ್ಲು ಹಿಂದಿನ ಅಸೆಂಬ್ಲಿಯ ಮುಂದೆ ಇದ್ದು ಅದನ್ನು ಸೆಲೆಕ್ಟ್ ಸಮಿತಿಯವರಿಗೆ ಒಪ್ಪಿಸಲಾಗಿತ್ತು. ಅವರು ಒಂದು ವರದಿಯನ್ನು ಸಹ ಆ ಬಿಲ್ಲಿನ ಮೇಲೆ ಕಳುಹಿಸಿದ್ದಾರೆ. ಆದರೆ ಆ ಅಸೆಂಬ್ಲಿ ರದ್ದಾದನಂತರ ಆ ಬಿಲ್ಲು ಲ್ಯಾಪ್ಸ್ ಆಗಿದೆ. ಆ ಬಿಲ್ಲನ್ನು ಸ್ವಲ್ಪ ತಿದ್ದುಪಡಿಯೊಡನೆ ಮುಂದೆ ಬರುವ ಅಧಿವೇಶನದಲ್ಲಿ ಈ ಸಭೆಯ ಮುಂದೆ ಇಡಬೇಕೆಂದು ತೀರ್ಮಾನವನ್ನು ಮಾಡಿದ್ದೇವೆ. ಈಗಾಗಲೇ ಸುಮಾರು ೪ ತಾಲ್ಲೂಕುಗಳಲ್ಲಿ ಗೇಣಿದಾರರ ಕಾನೂನನ್ನು ಜಾರಿಗೆ ತಂದಿದ್ದೇವೆ. ಅದನ್ನು ಕೂಡ ಪ್ರಾಯೋಗಿಕವಾಗಿ ತಂದಿದ್ದೇವೆ. ಅದರ ಸಾಧಕಬಾಧಕಗಳನ್ನು ಅನುಭವದಿಂದ ತಿಳಿದುಕೊಂಡು ಸೂಕ್ತ ಬದಲಾವಣೆ ಮಾಡಬೇಕಾದ ಅಗತ್ಯ ಸರ್ಕಾರಕ್ಕಿದೆ. ಆದ್ದರಿಂದ ನಾವು ಪ್ರತಿಗಾಮಿ ನೀತಿಯನ್ನು ಅನುಸರಿಸುತ್ತೇವೆ ಎಂಬ ಮನೋಭಾವ ಯಾರಿಗಾದರೂ ಇದ್ದರೆ ಅದು ತಪ್ಪು ಎಂದು ತಮ್ಮಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಆಮೇಲೆ ಶ್ರೀಮಾನ್ ವೀರಣ್ಣಗೌಡರು ಈ ವಿಶ್ವೇಶ್ವರಯ್ಯ ನಾಲಾ ಕೆಳಗಿನ ರೈತರ ವಿಚಾರದಲ್ಲಿ ಕೆಲವು ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಸರ್ಕಾರದ ಲೆಕ್ಕದ ಪ್ರಕಾರ ಈ ರೈತರಿಂದ ಕಂದಾಯ ಮತ್ತು ಇತರ ತೆರಿಗೆಗಳು ಸುಮಾರು 75 ಲಕ್ಷ ರೂಪಾಯಿಗಳವರೆಗೂ ಬರಬೇಕಾಗಿದೆ. ರೈತರು ನಮ್ಮ ಲೆಕ್ಕ ಸರಿಯಾಗಿಲ್ಲ ಎಂದು ಹೇಳುತ್ತಾ ಇದ್ದಾರೆ. ಕೆಲವು ಸಂದರ್ಭಗಳಲ್ಲಿ ಇದು ನಿಜ. ಸಮಜಾಯಿಷಿಯಿಲ್ಲ. ಆದರೆ ಇದು ಈವತ್ತಿನ.........

ಶ್ರೀ ಎಚ್. ಕೆ. ವೀರಣ್ಣಗೌಡರು.—ಒಂದಲ್ಲ, ಎಲ್ಲಾ ಸಂದರ್ಭಗಳಲ್ಲೂ ಸಮಜಾಯಿಷಿಯಿಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—ಆದರೆ ಇದು ಈವತ್ತು ಹುಟ್ಟಿದ ಸಮಸ್ಯೆಯಲ್ಲ. 8—10 ವರ್ಷಗಳಿಂದ...............

ಶ್ರೀ ಎಚ್. ಕೆ. ವೀರಣ್ಣಗೌಡರು.—18 ವರ್ಷಗಳಿಂದ.

ಶ್ರೀ ಕಡಿದಾಳ್ ಮಂಜಪ್ಪನವರು.—ಅಂತು ಬಹಳ ಹಳೆಯ ಕಾಲದ ಸಮಸ್ಯೆಯಿದು. ಆದ್ದರಿಂದ ಸಮಜಾಯಿಷಿ ಕೊಡುವುದಕ್ಕೆ ಸಾಧ್ಯವಾದಷ್ಟು ಪ್ರಯತ್ನಪಡುತ್ತೇವೆ. ಬಹಳ ಕಾಲದ ಹಿಂದಿನ ಸಮಸ್ಯೆಯಾದ್ದರಿಂದ, ಕೊಂಚ ತಡವಾದರೆ ಮಾನ್ಯ ಸದಸ್ಯರು ಕ್ಷಮಿಸಬೇಕೆಂದು ಮನವಿಮಾಡಿಕೊಳ್ಳುತ್ತೇವೆ.

ಆ ಮೇಲೆ ಜಮೀನು ಹಂಚಿಕೆಯ ವಿಷಯದಲ್ಲಿ ನಮ್ಮ ನೀತಿಯನ್ನು ಕೆಲವರು ಕೊಂಡಾಡಿದ್ದಾರೆ. ನಮ್ಮ ಸರ್ಕಾರದ ನೀತಿ ಭೂಮಿಯಿಲ್ಲದ ವ್ಯವಸಾಯಗಾರನಿಗೆ ಭೂಮಿಯನ್ನು ಕೊಡಬೇಕೆಂಬುದು. ನಾವು ಅಧಿಕಾರಕ್ಕೆ ಬಂದೊಡನೆಯೇ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಕೂಡ ಈ ಅಂಶವನ್ನು ತಿಳಿಯಪಡಿಸಿದ್ದೇವೆ. ಸಾಧ್ಯವಾದ ಮಟ್ಟಿಗೂ ಹೊಸದಾಗಿ ಜಮೀನುಗಳನ್ನು ಕೊಡುವಾಗ ಹರಾಜು ಹಾಕುವ ಪದ್ಧತಿಯನ್ನೂ ನಿಲ್ಲಿಸಿ ಜಮೀನಿಲ್ಲದ ಬಡವರಾದ ವ್ಯವಸಾಯಗಾರರಿಗೆ ಭೂಮಿಯನ್ನು ಕೊಡಬೇಕೆಂಬ ಅಂಶವನ್ನು ಸ್ಪಷ್ಟಪಡಿಸಿದ್ದೇವೆ.

ಇನ್ನು ಮಿಕ್ಕ ವಿಷಯಗಳನ್ನು ನನ್ನ ಸಹೋದ್ಯೋಗಿಗಳು ಹೇಳುತ್ತಾರೆ. ಇಷ್ಟು ಅಂಶಗಳನ್ನು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕೆ. ವಿ. ಶಂಕರಗೌಡರು.—ಒಂದು ವಿಚಾರ ಕೇಳಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಒಂದು ಸೂಚನೆಯನ್ನಿತ್ತರು. ಮಂತ್ರಿಗಳೂ ಈಗಲೇ ಭಾಗವಹಿಸಿ ತಮತಮಗೆ ಸಂಬಂಧಪಟ್ಟ ವಿಚಾರಗಳಿಗೆ ಅವರು ಉತ್ತರ ಕೊಡುವುದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು ಎಂದು. ಆದರೆ ನನಗೀಗ ಒಂದು ಯೋಚನೆ ಬಂದಿದೆ. ಒಮ್ಮೆ ಮಂತ್ರಿಗಳು ತಮ್ಮ ಬಾಬುಗಳಿಗೆ ಸಂಬಂಧಿಸಿದಂತೆ ಉತ್ತರ ಕೊಟ್ಟಮೇಲೆ, ಪುನಃ ಇತರ ಸದಸ್ಯರು ಮಾತನಾಡುವಾಗ ಏಳುವ ವಿಷಯಗಳಿಗೆ ಅವರೇ ಉತ್ತರ ಕೊಡುತ್ತಾರೆಯೇ ಎಂದು.

ಶ್ರೀ ಕೆ. ಹನುಮಂತಯ್ಯನವರು.—Let us see· ನೀವು ಹೇಳುವ ವಿಷಯಗಳನ್ನು ಹೇಳಿ. ನಮ್ಮಲ್ಲಿ ಯಾರಾದರೊಬ್ಬರು ಉತ್ತರಕೊಡುತ್ತಾರೆ. ತಮ್ಮ ಪ್ರಶ್ನೆಗಳಿಗೆ ಉತ್ತರವಂತೂ ಬರುತ್ತದೆ

(ಶ್ರೀ ನಾಗಪ್ಪಶೆಟ್ಟರು ಭಾಷಣಮಾಡಲು ನಿಂತರು.)

ಶ್ರೀ ಯು. ಎಂ. ಮಾದಪ್ಪನವರು —ಬಡ್ಜೆಟ್ ಚರ್ಚೆಗೆ ಇಟ್ಟಿರುವ ದಿನಗಳು ಸಾಲದು. ಇದನ್ನು ಇನ್ನು ಕೆಲವು ದಿನ ಮುಂದುವರಿಸಬೇಕು.

Sri K. HANUMANTHAIYA.—What is the Hon'ble Member's suggestion How many days does he want ?

ಶ್ರೀ ಯು. ಎಂ. ಮಾದಪ್ಪನವರು —ಅದನ್ನು ಸಭಾಸದಸ್ಯರ ಅಭಿಪ್ರಾಯಕ್ಕೆ ಬಿಡುತ್ತೇನೆ. ಬಡ್ಜೆಟ್ಟಿನ ಮೇಲೆ ಚರ್ಚೆ ಮಾಡಬೇಕೆಂದು ಎಷ್ಟು ಜನ ಕುತೂಹಲವುಳ್ಳವರಾಗಿದ್ದಾರೆ ನೋಡಿ. ಅಂಥದರಲ್ಲಿ ನೀವು ಪ್ರತಿಯೊಬ್ಬರೂ ಮಾತನಾಡಿದಹಾಗೆ ಉತ್ತರ ಕೊಡುತ್ತಾ ಹೋದರೆ, ಎಷ್ಟು ದಿವಸ ಇಟ್ಟರೂ ಸಾಧ್ಯವಾಗುವುದಿಲ್ಲ.

Sri K. HANUMANTHAIYA.—Now that stage is over· Let us go on with the di-cussion·

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು (ಶಿವಮೊಗ್ಗ).— ಮಾನ್ಯ ಅಧ್ಯಕ್ಷರೇ, ಈ ಬಡ್ಜೆಟ್ಟನ್ನು ನಾನು ಸ್ವಾಗತಿಸುತ್ತಾ ಒಂದೆರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರಬೇಕೆಂದಿಚ್ಛಿಸುತ್ತೇನೆ. ನೀರಾವರಿ ಕಾಮಗಾರಿಗಳು, ವಿದ್ಯುಚ್ಛಕ್ತಿ ಕಾಮಗಾರಿಗಳು, ಎನರ್ಜಿ ಪಾಟರುಗಳು ಮುಂತಾಗಿ ಈ ತೆರನಾದ ಕೆಲಸಗಳಿಗೆಲ್ಲಾ ನಮ್ಮ ಸರ್ಕಾರದವರು ಬಹಳಭಾಗ ಹಣವನ್ನು ಖರ್ಚುಮಾಡಲು ಸಿದ್ಧವಾಗಿದ್ದಾರೆಂಬುದು ಕಂಡುಬರುತ್ತದೆ. ಇಷ್ಟೆಲ್ಲಾ ಉಪಯುಕ್ತವಾದ ಕೆಲಸ ಕಾರ್ಯಗಳಲ್ಲಿ

ಹಣವನ್ನು ವಿನಿಯೋಗಿಸುತ್ತಿದ್ದರೂ, ನಮ್ಮ ಎದುರುಪಕ್ಷದವರು ಟೀಕೆ ಮಾಡುತ್ತಾ Capital Investmentಗಳಿಗೆ ಹೆಚ್ಚಿಗೆ ಹಾಕಿಬಿಟ್ಟು ಖಜಾನೆಯನ್ನು ಬರಿದುಮಾಡಿದ್ದಾರೆಂದು ಆಕ್ಷೇಪಿಸಿದರು. ಆದರೆ, ಸುಮ್ಮನೆ ವಿವೇಚನೆಯಿಲ್ಲದೆ ಮನೆಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಇಟ್ಟುಕೊಂಡು ಬೀಗಹಾಕಿಕೊಂಡು ಕೂತರೆ ಅದು ಬೆಳೆಯುತ್ತದೆಯೇ? ಅದಕ್ಕೇನಾದರೂ ಹೆಚ್ಚಿಗೆ ಬಡ್ಡಿ ಬರುತ್ತದೆಯೆ? ಅದೂ 3% ಮತ್ತು 4% ನಂತೆ ಸಾಲವೆತ್ತಿ ತಂದ ಹಣವನ್ನು ಟ್ರೆಜರಿಯಲ್ಲಿಟ್ಟು ಕೂತರೆ ಉಪಯೋಗಕ್ಕೆ ಬರುತ್ತದೆಯೇ? ಆದ್ದರಿಂದಲೇ ಆ ಹಣವನ್ನು ಖರ್ಚುಮಾಡಿದ್ದೇವೆ. ಅದರಿಂದ 6%, 7%, 10% ಬಡ್ಡಿ ಮುಂದೆ ಬರುವುದಿದೆ. ಸದ್ಯಕ್ಕೇನೋ ಫಲವಿಲ್ಲದಿರಬಹುದು. ಇವತ್ತು ನೀರಾವರಿ ಕಾಮಗಾರಿಗಳು ಮತ್ತು ಹೈಡ್ರೋ ಎಲೆಕ್ಟ್ರಿಕ್ ಕಾಮಗಾರಿಗಳ ಮೇಲೆ 18 ಕೋಟಿ ರೂಪಾಯಿಗಳನ್ನು ಹಾಕಿದ್ದೇವೆ. ಇವೆಲ್ಲವುಗಳಿಂದ ಹೆಚ್ಚಿಗೆ ಹಣ ಬಡ್ಡಿ ರೂಪದಲ್ಲಿಯೂ ಮತ್ತು ಇತರ ವಿಧದಲ್ಲಿಯೂ ನಮಗೆ ಬರುತ್ತದೆಯೇ ಇಲ್ಲವೇ ಎಂಬುದನ್ನು ಅವರು ಆಲೋಚನೆ ಮಾಡಲಿಲ್ಲವೆಂದು ಕಾಣುತ್ತದೆ.

ಆರೋಗ್ಯ ಇಲಾಖೆಯ ವಿಚಾರ. ಬಡ್ಜೆಟ್ಟಿನಲ್ಲಿ ನೋಡುವುದಾದರೆ ನಮ್ಮ ದೇಶದಲ್ಲಿ ಆರೋಗ್ಯ ರಕ್ಷಣೆಗಾಗಿ ಬಹಳವಾಗಿ ಖರ್ಚುಮಾಡುತ್ತಿರುವುದಾಗಿ ಕಂಡುಬರುತ್ತದೆ. ಆದರೆ ಹೀಗೆ ಸುಮಾರು 40 ಲಕ್ಷ ರೂಪಾಯಿಗಳನ್ನು ಕೊಡಲಾಗುತ್ತಿದೆಯೆಂದು ಕಂಡುಬಂದರೂ ಇಷ್ಟು ಹಣದಲ್ಲಿ ಬಹುಭಾಗ ಸುಮಾರು 35 ಲಕ್ಷ ರೂಪಾಯಿಗಳಷ್ಟು ಸಂಬಳ ಸಾರಿಗೆಗಳಿಗೇ ಹೋಗುತ್ತಿವೆ. ಬಾಕಿ 4-5 ಲಕ್ಷ ರೂಪಾಯಿಗಳು ಮಾತ್ರ ಔಷಧಿಗಳಿಗಾಗಿ ಖರ್ಚಾಗುತ್ತಿವೆ. ಈ ತೆರನಾಗಿ 100 ರೂಪಾಯಿಗಳಲ್ಲಿ 85 ರೂಪಾಯಿಗಳಷ್ಟು ಸಂಬಳ ಸಾರಿಗೆಗಳಿಗೇ ಖರ್ಚು ಮಾಡುತ್ತಾ ಹೋದರೆ ಜನರ ಆರೋಗ್ಯರಕ್ಷಣೆ ಎಷ್ಟು ಮಟ್ಟಿಗಾದೀತು? ಏನಿದ್ದರೂ ಸಂಬಳ ಸಾರಿಗೆಗಳು ಶೇಕಡ 20 ಕ್ಕೆ ಮೇಲ್ಪಟ್ಟು ಹೋಗದ ರೀತಿಯಲ್ಲಿ ನಮ್ಮ ಖರ್ಚುಗಳನ್ನು ಹೊಂದಿಸಿಕೊಳ್ಳಬೇಕೇ ಹೊರತು ಅದಕ್ಕಿಂತ ಹೆಚ್ಚಿಗೆ ಮಾಡಕೂಡದು. ಈಗಿನಂತೆ 85 ಭಾಗದಷ್ಟನ್ನು ಸಂಬಳ ಸಾರಿಗೆಗಳಿಗೇ ಖರ್ಚು ಮಾಡಿ 15 ಭಾಗದಷ್ಟು ಮಾತ್ರ ವಾಸ್ತವವಾಗಿ ಔಷಧಿಗಳಿಗಾಗಿ ಖರ್ಚು ಮಾಡುವುದು ಸರಿಯಲ್ಲ. ಈ ಪದ್ಧತಿ ಬದಲಾವಣೆಯಾಗಬೇಕು.

ಅಲ್ಲದೆ, ಆರೋಗ್ಯರಕ್ಷಣೆಯ ವಿಷಯದಲ್ಲಿ ಮುಖ್ಯವಾಗಿ ನಾವು ಗಮನಿಸಬೇಕಾದದ್ದು ಹಾಲಿನ ಸರಬರಾಯಿ ಪ್ರಶ್ನೆ. ಹುಟ್ಟಿದಾರಭ್ಯ ಸಾಯುವ ದಿನದವರೆಗೂ ನಮ್ಮ ದೇಶದಲ್ಲಿರುವ ಸಮಸ್ಯೆಯೆಂದರೆ ಹಾಲಿನ ಸಮಸ್ಯೆಯೆಂದು ಕಾಣುತ್ತದೆ. ನಮ್ಮ ಸರ್ಕಾರದವರೇಕೋ ಈ ವಿಚಾರದಲ್ಲಿ ಹೆಚ್ಚು ಗಮನ ಕೊಟ್ಟಿಲ್ಲ. ಅಮೆರಿಕಾ, ಹಾಲೆಂಡ್ ಮುಂತಾದ ಬೇರೆ ಬೇರೆ ದೇಶಗಳಲ್ಲಿ ನೋಡಿದರೆ, ಅಲ್ಲಿ ಒಂದು ಹಸು ದಿನಕ್ಕೆ 30-40 ಸೇರು ಕರೆಯುತ್ತದೆಂದು ಕೇಳಿದ್ದೇವೆ. ನಮ್ಮ ದೇಶದಲ್ಲಿ ಒಂದು ಸೇರೂ ಸರಿಯಾಗಿ ಕರೆಯುವುದಿಲ್ಲ. ಅದರಲ್ಲೂ ನಮ್ಮ ಮಲೆನಾಡಿನಲ್ಲಿ ಒಂದು ಪಾವಿಗೆ ಇಳಿದುಹೋಗುತ್ತದೆ. ಎಂಥೆಂಥಾ ಹಸುಗಳೂ ಎರಡು ವರ್ಷಕಾಲ ಮಲೆನಾಡು ಭಾಗಕ್ಕೆ ಹೋದವೆಂದರೆ ಬರಡಾಗಿ ಹೋಗುತ್ತವೆ. ನಮ್ಮ ದೇಶದಲ್ಲಿ ಸರಾಸರಿ ಉತ್ಪನ್ನ ತೆಗೆದುಕೊಂಡರೆ ದಿನಕ್ಕೆ ಒಂದು ಔನ್ಸ್ ಉತ್ಪತ್ತಿಯಾಗುತ್ತದೆ. ಅದೇ ಬೇರೆ ಹಾಲೆಂಡ್, ಆಸ್ಟ್ರೇಲಿಯಾ, ಅಮೆರಿಕಾ ಮುಂತಾದ ದೇಶಗಳಲ್ಲಿ, 75 ಔನ್ಸ್, 78 ಔನ್ಸ್‌ಗಳು ಮತ್ತು ಇನ್ನೂ ಹೆಚ್ಚಿಗೆ ಉಪಯೋಗಿಸುತ್ತಾರೆ. ಆ ದೇಶಗಳಲ್ಲಿ ಹಾಲಿನ ಬಳಕೆ ಅಷ್ಟು ಜಾಸ್ತಿಯಾಗಿರುವುದರಿಂದಲೇ ಅವರ ಆರೋಗ್ಯ ಬಹಳ ಸುಧಾರಣೆಯಾಗಿದೆ. ಅಂಥಾದ್ದರಲ್ಲಿ ನಮ್ಮ ಬಡ್ಜೆಟ್ಟಿನಲ್ಲಿ ನೋಡಿದ್ದರೆ ಹಾಲಿನ ಉತ್ಪನ್ನವನ್ನು ಜಾಸ್ತಿಮಾಡುವುದಕ್ಕಾಗಿ, ಆಕಳ ಪೋಷಣೆಗಾಗಿ, ಕ್ಷೇತ್ರಗಳ ಅಭಿವೃದ್ಧಿಗಾಗಿ ಹೆಚ್ಚಿನ ಹಣ ಕೊಟ್ಟಿಲ್ಲ. ಆದ್ದರಿಂದ ಸರ್ಕಾರದವರು ಈ ವಿಷಯವನ್ನು ಪರಿಶೀಲನೆಮಾಡಿ, ಹಾಲಿನ ಉತ್ಪನ್ನ ಹೀಗೆ ಕಡಮೆಯಾಗಿರುವುದಕ್ಕೆ ಕಾರಣವೇನೆಂಬುದನ್ನು ಕಂಡುಹಿಡಿದು, ನಮ್ಮ ದೇಶದಲ್ಲಿಯೂ ಹಾಲಿನ ಉತ್ಪನ್ನವನ್ನು ಜಾಸ್ತಿಮಾಡಿದರೆ, ತಾವೀಗ ಹೆಲ್ತ್ ಇಲಾಖೆಗೂ Anti-diseases ಔಷಧಗಳಿಗೂ ಖರ್ಚುಮಾಡುತ್ತಿರುವ ಹಣ ಬಹಳ ಮಟ್ಟಿಗೆ ಉಳಿತಾಯವಾಗುತ್ತದೆ. ಪ್ರತಿಯೊಬ್ಬ ಮನುಷ್ಯನೂ ಹೆಚ್ಚುಹೆಚ್ಚಿಗೆ ಹಾಲಿನ ಉಪಯೋಗ ಮಾಡಿದರೆ ಆತನ ಆರೋಗ್ಯ ಹೆಚ್ಚಿ ನೀವು ಮೆಡಿಕಲ್ ಇಲಾಖೆಗೆ ಹಾಕುತ್ತಿರುವ ಹಣವನ್ನು ಕಡಮೆಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕೆ. ಹನುಮಂತಯ್ಯನವರು.—ಆಕಳು ವಿಷಯ ಪ್ರಸ್ತಾಪ ಮಾಡುವಾಗ, ಮುಖ್ಯವಾದ ಕಷ್ಟ ಬಂದಿರುವುದು ಮೇವಿನ ಕಷ್ಟ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಮೇವಿನ ಕಷ್ಟಬಂದರೆ, ಆಕಳನ್ನು ಸಾಕಬೇಕೆನ್ನುವವರು ಇರತಕ್ಕ ಜಮೀನಿನಲ್ಲಿಯೇ ಸ್ವಲ್ಪ ಭಾಗವನ್ನು ಮೇವನ್ನು ಬೆಳೆಸುವುದಕ್ಕೇ ಬಿಡಬೇಕು. ಒಂದು ಎಕರೆ-ಎರಡು ಎಕರೆ ಜಮೀನನ್ನು ಎಲ್ಲರೂ ಇದಕ್ಕಾಗಿ ಮೀಸಲಿಟ್ಟು ಒಳ್ಳೆ ಹುಲ್ಲು ಬೆಳೆಸಲು ಪ್ರಯತ್ನಮಾಡಿದರೆ, ಇದರ ಪರಿಹಾರ ಆಗಿಯೇ ಆಗುತ್ತದೆ. ಬೇರೆ ದೇಶಗಳಲ್ಲಿ ಹುಲ್ಲುಗಾವಲುಗಳನ್ನು ಏರ್ಪಡಿಸಿ ಹಸುರು ಹುಲ್ಲನ್ನು ಬೆಳೆಸುವುದಕ್ಕೆ ಏರ್ಪಾಡುಮಾಡಿರುತ್ತಾರೆ. ಅದೇ ರೀತಿ ನಾವು ಕಾರ್ಯಕ್ರಮ ಕೈಕೊಳ್ಳಬೇಕು. ಈಗ ನಮ್ಮ ದೇಶದ ಹುಲ್ಲುಗಾವಲುಗಳನ್ನು ನೋಡಿದರೆ ಅಲ್ಲಿ ಕುರುಚಲು ಗಿಡಗಳು ಬೆಳೆದಿರುವುದನ್ನು ಕಾಣುತ್ತೇವೆ. ಅವನ್ನು ಹುಲ್ಲುಗಾವಲು ಎನ್ನುವುದಕ್ಕೇ ಆಗುವುದಿಲ್ಲ. ಇಂಥವುಗಳನ್ನೆಲ್ಲಾ ಸರಿಯಾದ ರೀತಿಯಲ್ಲಿ ವ್ಯವಸಾಯ ಮಾಡಿಸಿ ಹುಲ್ಲುಗಾವಲುಗಳನ್ನು ಸರಿಪಡಿಸಿದರೆ ಬೇಕಾದಷ್ಟು ಮೇವು ಒದಗುತ್ತದೆಂದು ಹೇಳಬಹುದು.

[Sri M. V. Rama Rao in the Chair.]

ವ್ಯವಸಾಯದ ಇಲಾಖೆಗೆ ಖರ್ಚುಮಾಡುತ್ತಿರುವ ಹಣವನ್ನು ನೋಡಿದರೂ, ಒಟ್ಟಿನಲ್ಲಿ ಶೇಕಡ 90ರಷ್ಟು ಭಾಗ ಸಂಬಳ ಸಾರಿಗೆಗಳಿಗೇ ಹೋಗಿ, ವಾಸ್ತವವಾಗಿ ವ್ಯವಸಾಯಾಭಿವೃದ್ಧಿಗೆ 1% ರಷ್ಟು ಕೂಡ ಖರ್ಚಾಗುತ್ತಿಲ್ಲ. ಹೀಗೆಯೇ ಪ್ರತಿಯೊಂದು ಬಾಬಿನಲ್ಲಿಯೂ ನೀವು ಸಂಬಳ ಸಾರಿಗೆಗಳಿಗಾಗಿ ಖರ್ಚುಮಾಡುತ್ತಿರುವ ಹಣ ವಿಪರೀತವಾಗಿದೆ. ಹೊಸದಾಗಿ ಯಾವುದೊಂದು ಯೋಜನೆಯನ್ನು ಕೈಕೊಂಡರೂ, ಅದಕ್ಕೆ ಖರ್ಚುಮಾಡುವ ಹಣದಲ್ಲಿ ಎಷ್ಟು ಭಾಗ ನೇರವಾಗಿ ರೈತನಿಗೆ ಉಪಯೋಗವಾಗುತ್ತಿದೆಯೆಂಬುದನ್ನು ನೋಡಬೇಕು. ಅಭಿವೃದ್ಧಿ ಯೋಜನೆಗೆಂದು 10 ಲಕ್ಷ ರೂಪಾಯಿಗಳನ್ನು provide ಮಾಡಿದರೂ, ಅದರಲ್ಲಿ 8 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಸಂಬಳಗಳಿಗೆ ಹೋಗಿಬಿಟ್ಟಿರುತ್ತದೆ. ಎಂದಮೇಲೆ, ಇನ್ನು ಉಳಿದ ಎರಡು ಲಕ್ಷ ರೂಪಾಯಿಗಳಲ್ಲಿ ಏನುತಾನೆ ಅಭಿವೃದ್ಧಿಸಾಧನೆಯಾದೀತೆಂಬುದನ್ನು ಯೋಚನೆಮಾಡಿ.

11-30 A.M.

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿಯವರು)

ನಮ್ಮ ದೇಶದಲ್ಲಿ Cattle Insurance ಇಲ್ಲ. ಯಾವುದಾದರೂ ಕಾರಣಗಳಿಂದ ರೈತರ ದನಕರುಗಳು ಸತ್ತುಹೋಗಿ ತೊಂದರೆಯಾದರೆ ಅದಕ್ಕೆ ಏನೂ ಪರಿಹಾರ ಮಾರ್ಗವಿಲ್ಲ. ದೇಶದಲ್ಲಿರುವ ಉತ್ತಮವಾದ ದನಗಳಿಗೆ ಇನ್ಷ್ಯೂರೆನ್ಸ್ ಮಾಡಿಸಬೇಕು. ದನಗಳು ಸತ್ತು ಯಾರು ತೊಂದರೆಗೀಡಾಗುತ್ತಾರೋ ಅವರಿಗೆ ಈ ಮಾರ್ಗದಿಂದ ದನಗಳನ್ನೊದಗಿಸುವ ಏರ್ಪಾಡಾಗಬೇಕು. ಜನರು ಸತ್ತರೆ ಹೇಗೆ ಅವರ ಆಶ್ರಿತರಿಗೆ ಪರಿಹಾರ ದೊರೆಯುವಂತೆ ವಿಮೆ ಮಾಡಿಸುತ್ತಾರೋ ಅದೇ ರೀತಿ ಮಾಡಬೇಕು. ದನವೇ ರೈತನ ಆಸ್ತಿ. ಒಂದು ಜೊತೆ ಎತ್ತುಗಳು ಸತ್ತರೆ, ಆ ರೈತ ಇನ್ನು ಐದು ವರ್ಷ ಕಷ್ಟಪಟ್ಟರೂ ಮತ್ತೊಂದು ಜೊತೆ ಎತ್ತುಗಳನ್ನು ಕೊಂಡುಕೊಳ್ಳುವುದಕ್ಕಾಗುವುದಿಲ್ಲ. ಹತ್ತು ವರ್ಷವಾದರೂ ಕಷ್ಟವಾಗುತ್ತದೆ. ಸರ್ಕಾರದಿಂದ ಅಥವಾ ಬೇರೆ ಕಡೆ ಸಾಲ ಪಡೆಯಬೇಕಾದರೆ ಸೆಕ್ಯೂರಿಟಿ ಕೇಳುತ್ತಾರೆ ಅದನ್ನು ಕೊಡಲು ರೈತನಿಗೆ ಚೈತನ್ಯವಿರುವುದಿಲ್ಲ, ಸಾಧ್ಯವಾಗುವುದಿಲ್ಲ. ಅದಕಾರಣ ದನಕರುಗಳು ಸತ್ತರೆ ಪರಿಹಾರ ದೊರೆಯುವಂತೆ Cattle Insurance ಏರ್ಪಾಡು ಮಾಡಬೇಕು. ಇನ್ನೊಂದು Crop Insurance ಏರ್ಪಾಡು. ಮಳೆ ಸಕಾಲಕ್ಕೆ ಬಾರದೇ ಇರುವ ಸ್ಥಳಗಳಲ್ಲಿ ಅನೇಕ ಕಷ್ಟಗಳು ಬರುತ್ತವೆ. ಒಂದೊಂದು ತಾಲ್ಲೂಕಿನಲ್ಲಿ ಈ ಇಲಾಖೆಯ ಒಂದೊಂದು ಶಾಖೆಯನ್ನಿಟ್ಟು ಒಂದು ಕ್ರಮವನ್ನು ಗೊತ್ತುಮಾಡಿ ಪ್ರತಿ ರೈತನೂ ಇನ್ಷ್ಯೂರೆನ್ಸ್ ಪ್ರೀಮಿಯಂ ಹಣ ಕೊಡುವ ಹಾಗೆ ಮಾಡಿ, ಯಾವುದಾದರೂ ಪ್ರಾಂತದಲ್ಲಿ ಮಳೆ ಬೆಳೆಯಾಗದಿದ್ದರೆ ಅಂಥಾ ಸಂದರ್ಭದಲ್ಲಿ ಅಲ್ಲಿನ ಜನರಿಗೆ ಪರಿಹಾರವನ್ನೊದಗಿಸಬೇಕು.

ಮಲೆನಾಡಿನಲ್ಲಿ ಸುಮಾರು ಎರಡು ಲಕ್ಷದಿಂದ ಐದು ಲಕ್ಷ ಎಕರೆಯಷ್ಟು ಜಮೀನು ವ್ಯವಸಾಯವಿಲ್ಲದೆ ಇದೆ. ಅಲ್ಲಿ ಮಳೆ ವರ್ಷಕ್ಕೆ 250ರಿಂದ 300 ಅಂಗುಲದವರೆಗೆ ಬರುತ್ತದೆ. ಬಹುಮಟ್ಟಿಗೆ ಈ ನೀರೆಲ್ಲ ನದಿಗೆ ಹರಿದು ಹೋಗಿ ಸಮುದ್ರದ ಪಾಲಾಗಿಹೋಗುತ್ತಿದೆ. ಆದಕಾರಣ ಎಲ್ಲಿ ನದಿ ಇದೆ, ಎಲ್ಲಿ ಕೆರೆ ಇದೆ ಅಲ್ಲೆಲ್ಲಾ ನೀರು ನಿಲ್ಲುವಂತೆ ಮಾಡಿಸಿದರೆ, ಬೀಳು ಬಿದ್ದಿರುವ ಜಮೀನೆಲ್ಲವೂ ವ್ಯವಸಾಯಕ್ಕೆ ಬರುತ್ತದೆ. ಮಲೆನಾಡಿನಲ್ಲಿ ವ್ಯವಸಾಯಕ್ಕೆ ಇನ್ನೂ ಅನೇಕ ತೊಂದರೆಗಳಿವೆ. ಜನರ ಆರೋಗ್ಯ ಸರಿಯಾಗಿಲ್ಲ; ರಸ್ತೆಗಳು ಸರಿಯಾಗಿಲ್ಲ. ಈ ಎಲ್ಲಕ್ಕೂ ಗಮನ ಕೊಟ್ಟು ಉತ್ತಮಪಡಿಸಬೇಕು. ಒಂದು ಉದಾಹರಣೆ ಹೇಳುತ್ತೇನೆ. ಈಗ್ಗೆ 25 ವರ್ಷಗಳ ಹಿಂದೆ ಒಂದು ಅಣೆಕಟ್ಟು ಒಡೆದುಹೋಯಿತು. ಅದನ್ನು ರಿಪೇರಿಮಾಡಿಸಬೇಕೆಂದು ಅನೇಕ ಸಾರಿ ಸರ್ಕಾರಕ್ಕೆ ಜನ ಅರ್ಜಿ ಹಾಕಿದರು. ಇದುವರೆಗೂ ಮಾಡಿಸಿಲ್ಲ. ಹಿಂದೆ ಅದಕ್ಕೆ ಒಂದು ಲಕ್ಷ ರೂಪಾಯಿಗೆ ಅಂದಾಜಾಗಿತ್ತು, ಈಗ ಅದಕ್ಕೇ ಒಂಭತ್ತು ಲಕ್ಷ ರೂಪಾಯಿ ಆಗುತ್ತದೆ. ಐದು ಸಾವಿರ ಎಕರೆ ಜಮೀನು ಸಾಗುವಳಿಯಾಗುತ್ತಿತ್ತು, ಸುಮಾರು ಹತ್ತು ಸಾವಿರದವರೆಗೆ ಪ್ರಜಾಸಂಖ್ಯೆ ಇತ್ತು. ಈಗ ಅವರು ಎಲ್ಲವನ್ನೂ ಬಿಟ್ಟು ಬೇರೆ ಕಡೆಗಳಿಗೆ ಹೊರಟುಹೋಗಿದ್ದಾರೆ. ಅಲ್ಲಿ ಸರಿಯಾದ ರಸ್ತೆ ಕೂಡ ಇಲ್ಲ. ರೈತರು ಮುಚ್ಚಳಿಕೆ ಕೂಡ ಬರೆದುಕೊಟ್ಟಿದ್ದಾರೆ, ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಹೇಳಿ. 25 ವರ್ಷದಿಂದ ರಿಪೇರಿ ಆಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು.—ಅದು ಯಾವ ಕೆರೆ?

ಶ್ರೀ ಎಸ್. ಸಿದ್ದಪ್ಪನವರು.—ಒಂದಲ್ಲ; ಶಿವಮೊಗ್ಗ ತಾಲ್ಲೂಕಿನ ಕಡ್ಲೆಒಡ್ಡು, ಹಿರೇಒಡ್ಡು, ಬರೆಹಳ್ಳ ಎಂದಿವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿಯವರು.—ಇನ್ನು ಕಾಂಪೋಸಿಟ್ ಸ್ಕೀಂ ಎಂದು ಆರೇಳು ಲಕ್ಷ ರೂಪಾಯಿಗಳನ್ನೊದಗಿಸಿದ್ದೀರಿ. ಯಥಾಪ್ರಕಾರ ನೇರವಾಗಿ ಇದರ ಫಲ ರೈತನಿಗೆ ದೊರೆಯುತ್ತಿಲ್ಲ. ರೈತ ತನ್ನ ದನಗಳ ತಳಿಗಳನ್ನು ಉತ್ತಮಪಡಿಸಿ ವ್ಯವಸಾಯವನ್ನು ಅಭಿವೃದ್ಧಿಗೆ ತರುವುದಕ್ಕೆ ಹೆಚ್ಚಿನ ಹಣ ಆತನಿಗೆ ಸಿಕ್ಕುವುದಿಲ್ಲ. ಇದರಿಂದ ರೈತರಿಗೆ ಹೆಚ್ಚು ಉಪಯೋಗವಾಗುತ್ತಿಲ್ಲ. ಇದು ಹೆಚ್ಚು ಉಪಯೋಗಕರವಾಗುವ ಹಾಗೆ ಸೂಕ್ತ ಬದಲಾವಣೆಮಾಡಬೇಕೆಂದು ಸೂಚಿಸುತ್ತೇನೆ.

ದೇಶದಲ್ಲಿ ಡಾಲ್ಡಾ ಬೇಕಾದಷ್ಟು ಪ್ರಚಾರವಾಗುತ್ತಿದೆ. ತತ್ವತಃ ಈ ವಿಚಾರವನ್ನು ಪರಿಶೀಲನೆಮಾಡಬೇಕು. ಈ ಡಾಲ್ಡಾ ಯಾವುದರಿಂದ ತಯಾರಾಗುತ್ತದೆಯೆಂದರೆ, ನೆಂಗಾಯಿ ಎಣ್ಣೆಯಿಂದ. ಪ್ರತಿಯೊಬ್ಬರೂ ಡಾಲ್ಡಾವನ್ನು ಉಪಯೋಗಿಸುವುದಕ್ಕೆ ಪ್ರಾರಂಭವಾದಿದ ಮೇಲೆ ಆಕಳುಗಳನ್ನು ಸಾಕಿ ಹಾಲು ತುಪ್ಪ ಇವುಗಳನ್ನು ಉಪಯೋಗಮಾಡುವುದಿಲ್ಲ. ಇದರಿಂದ ದನ ಉತ್ತಮವಾಗುವುದಿಲ್ಲ. ಅಲ್ಲದೆ ಹೆಚ್ಚಾಗಿ ನೆಲಗಡಲೆ ಬೆಳೆಯುವುದಕ್ಕೆ ಪ್ರಾರಂಭಮಾಡಿ ಆಹಾರಧಾನ್ಯ ಬೆಳೆಯುವುದನ್ನು ಬಿಡುತ್ತಾರೆ. ಇದರಿಂದ ದೇಶದ ಆಹಾರ ಪರಿಸ್ಥಿತಿ ಕಟ್ಟಹೋಗುತ್ತದೆ. ರೈತರು ಕಣ್ಣುಮುಚ್ಚಿಕೊಂಡು ಡಾಲ್ಡಾ ಉತ್ಪತ್ತಿಗಾಗಿ ನೆಲಗಡಲೆ ಬೆಳಸಿ, ಪರದೇಶಗಳಿಗೆ ಕಳುಹಿಸಿ ಅಲ್ಲಿಂದ ತಯಾರಾಗಿ ಬರತಕ್ಕ ಡಾಲ್ಡಾ ತುಪ್ಪವನ್ನು ತಿನ್ನುವುದಕ್ಕೆ ಪ್ರಾರಂಭವಾಡಿದರೆ ನಿಜವಾದ ತುಪ್ಪ ಹೇಗಾಗುತ್ತದೆ? ಆಕಳು ಸಾಕತಕ್ಕ ಕ್ರಮ ಹೇಗೆ ಮುಂದುವರಿಯುತ್ತದೆ? ನಮ್ಮ ರೈತ ಹಾಲು, ಮೊಸರು, ಬೆಣ್ಣೆ ಉತ್ಪನ್ನಮಾಡದೆ ಹೋದರೆ ಒಳ್ಳೆಯ ತುಪ್ಪ ಹೇಗೆ ಸಿಕ್ಕುತ್ತದೆ? ದನ ಸಾಕದೆ ಹೋದರೆ ಗೊಬ್ಬರ ಹೇಗೆ ಸಿಕ್ಕುತ್ತದೆ? ಡಾಲ್ಡಾ ಉತ್ಪತ್ತಿಮಾಡಲು ದೊಡ್ಡ ದೊಡ್ಡ ಕಾರ್ಖಾನೆಗಳು ಪ್ರಾರಂಭವಾಗಿವೆ. ರೈತನಿಗೆ ಉಪಕಸುಬಾಗಿ ಹಾಲು, ಮೊಸರು, ಬೆಣ್ಣೆಮಾಡಿ ಪ್ರತಿ ಗ್ರಾಮದಲ್ಲಿಯೂ ಮಾರಿ ಹಣ ಸಂಪಾದನೆಮಾಡುವ ಉದ್ಯಮವಿತ್ತು. ಅದಕ್ಕೆ ಧಕ್ಕೆ ಬರುವ ರೀತಿಯಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುತ್ತೇವೆಂದು ಸರ್ಕಾರದವರು ಹೇಳುವಾಗ, ಇದರಿಂದ ರೈತರ ಪರಿಸ್ಥಿತಿ ಹೇಗಾಗುತ್ತದೆ ಎಂಬುದನ್ನು ಪರಿಶೀಲಿಸಿ, ಡಾಲ್ಡಾ ಉತ್ಪತ್ತಿಗೆ ಉತ್ತೇಜನ ಕೊಡಬೇಕೇ ಬೇಡವೇ ಎಂಬುದನ್ನು ತೀರ್ಮಾನಿಸಬೇಕು.

ಇನ್ನು ಕ್ಷಾಮಪೀಡಿತ ಪ್ರದೇಶಗಳಲ್ಲಿ ಜನರಿಗೆ ಪರಿಹಾರ ದೊರಕಿಸಬೇಕೆಂದು ಫ್ಯಾಮಿನ್‌ರಿಲೀಫ್ ಫಂಡ್ ಎಂಬುದನ್ನು ಮಾಡಿದ್ದಾರೆ. ಇದಕ್ಕೆ ಯಾವುದೋ ಒಂದು ಹಣದಲ್ಲಿ ತೆಗೆದು, ಯಾವುದೋ ರೀತಿಯಲ್ಲಿ ವಸೂಲುಮಾಡಿಹಾಕಿ ಅದನ್ನು ಈ ಕಾರ್ಯಕ್ಕೆ ಉಪಯೋಗಮಾಡಬೇಕೆಂದು ಸರ್ಕಾರದವರು ಪ್ರಯತ್ನಮಾಡುತ್ತಾರೆ. ಇದಕ್ಕೆ ಬದಲು, ಈಗ ಅನೇಕ ಶೇರಿಗೆಗಳನ್ನು ಹಾಕುತ್ತಿರುವಂತೆ ಅವುಗಳ ಜೊತೆಗೆ ಇದಕ್ಕೆ ಪ್ರತ್ಯೇಕವಾಗಿ ಫ್ಯಾಮಿನ್‌ರಿಲೀಫ್ ಶೇರಿಗೆಯನ್ನು ರೂಪಾಯಿಗೆ ಒಂದಾಣೆ ಅಥವಾ ಅರ್ಧ ಆಣೆಯಂತೆ ಒಂದು ಸೆಸ್‌ರೂಪದಲ್ಲಿ ವಸೂಲುಮಾಡಿ ಇದೇ ಒಂದು ಫಂಡ್ ಮಾಡುವ ಏರ್ಪಾಡು ಮಾಡಿದ್ದರೆ ಎಷ್ಟೋ ಅನುಕೂಲವಾಗುತ್ತದೆ. ಈ ಹೊತ್ತು ಹುಲ್ಲು ಕೊಡಿ, ಅಕ್ಕಿ ಕೊಡಿ ಎಂದು ಸರ್ಕಾರವನ್ನು ಕೇಳುವ ಪರಿಸ್ಥಿತಿ ತಪ್ಪುತ್ತದೆ. ಒಂದು 'ಯೂನಿಫಾರಂ ಟ್ಯಾಕ್ಸೇಷನ್' ಆಗುತ್ತದೆ. ಕೋಲಾರದಲ್ಲಿ ಮಳೆ ಬಂದರೆ ಆ ವರ್ಷ ಅನುಕೂಲವಿರುತ್ತದೆ; ಬೇರೆಕಡೆ, ಮಳೆ ಇಲ್ಲದೇ

ಕಷ್ಟವಿರುವ ಪ್ರದೇಶಕ್ಕೆ ಉಪಯೋಗಿಸಬಹುದು ಹೀಗೆ ಸರ್ಕಾರ ಕೆಲವು ಲಕ್ಷ ರೂಪಾಯಿಗಳನ್ನು ವಸೂಲುಮಾಡಿಟ್ಟರೆ ಯಾವ ತಾಲ್ಲೂಕಿನಲ್ಲಿ ಕ್ಷಾಮ ಬರುತ್ತದೆಯೋ ಆ ತಾಲ್ಲೂಕಿನಲ್ಲಿ ಉಪಯೋಗ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಸಂಸ್ಥಾನದಲ್ಲೆಲ್ಲಾ ಈ ತೆರಿಗೆಯನ್ನು ಹಾಕಿ ವಸೂಲುಮಾಡಿ ಸರ್ಕಾರದಲ್ಲಿಟ್ಟಿದ್ದೇ ಆದರೆ, ಯಾವ ಸಂದರ್ಭದಲ್ಲಾದರೂ ಆವಶ್ಯಕತೆ ಬಿದ್ದರೆ, ಸರ್ಕಾರ ಈ ಹಣವನ್ನು ತಕ್ಷಣ ಪರಿಹಾರ ಕೊಡಲು ಉಪಯೋಗಿಸಬಹುದು. ಸರ್ಕಾರದಲ್ಲಿ ಹಣವಿಲ್ಲ ಎಂದು ಹೇಳುವುದಕ್ಕೆ ಅವಕಾಶವಿರುವುದಿಲ್ಲ.

ಭಿಕ್ಷಾಟನೆ ದೇಶದಲ್ಲಿ ಬಹಳ ಹೆಚ್ಚಾಗಿದೆ. ಸರ್ಕಾರದವರು ಇದನ್ನು ತಪ್ಪಿಸಲು ಕಾನೂನನ್ನೇನೋ ಮಾಡಿದ್ದಾರೆ. ಇದನ್ನು ಸಂಸ್ಥಾನಾದ್ಯಂತ ಜಾರಿಗೆ ತಂದು ಭಿಕ್ಷಾಟನೆಯನ್ನು ತಡೆಗಟ್ಟಬೇಕು. ಚಿಕ್ಕ ಚಿಕ್ಕ ಮಕ್ಕಳು ಭಿಕ್ಷುಕರ ಜೊತೆಯಲ್ಲಿ ಹೋಗುವುದನ್ನು ತಪ್ಪಿಸಿ, ಅವರಿಗೆ ಒಂದು ಪಾಠಶಾಲೆಯನ್ನು ಏರ್ಪಡುಮಾಡಿ, ಆ ಮಕ್ಕಳ ಮನಸ್ಸು ಬದಲಾವಣೆಯಾಗುವಂತೆ ಅವರಿಗೆ ತಕ್ಕ ಶಿಕ್ಷಣಕೊಟ್ಟು ಸತ್ಪ್ರಜೆಗಳಾಗುವಂತೆ ಮಾಡಿದರೆ, ಖಂಡಿತವಾಗಿಯೂ ದೇಶದಲ್ಲಿ ಈ ಭಿಕ್ಷಾವೃತ್ತಿ ಹೋಗುವುದರಲ್ಲಿ ಸಂದೇಹವಿಲ್ಲ.

ಇನ್ನು ದೇಶದಲ್ಲಿ ಕಮ್ಯೂನಲ್ ಹಾಸ್ಟೆಲ್ ಗಳಿವೆ. ಜಾತಿ ರಹಿತವಾದ ಈ ರಾಷ್ಟ್ರದಲ್ಲಿ ಇಂತಹ ಜಾತೀಯವಾದ ಹಾಸ್ಟಲುಗಳಿರುವುದು ಸರಿಯಲ್ಲ. ಆದಕಾರಣ ಹಾಸ್ಟಲುಗಳನ್ನು ಏರ್ಪಡಿಸುವಾಗ ಇಂತಹ ಜಾತಿಗೆ ಮಾತ್ರ ಅಂತಹ ಜಾತಿಯವರಿಗೆ ಮಾತ್ರ ಎಂದು ಮಾಡದೆ ಎಲ್ಲ ಪಂಗಡಗಳವರೂ ಇರುವಂತಹ ಹಾಸ್ಟೆಲುಗಳನ್ನೇ ಏರ್ಪಡಿಸುವ ಕ್ರಮವನ್ನನುಸರಿಸಬೇಕು. ಇಂತಹ ಹಾಸ್ಟಲುಗಳಿಗೆ ಮಾತ್ರ ಉತ್ತೇಜನ ಕೊಡಬೇಕು. ಒಂದೊಂದು ಜಾತಿಯ ಹಾಸ್ಟಲುಗಳಿಗೆ ಸರ್ಕಾರ ಉತ್ತೇಜನ ಕೊಡುವುದನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸುತ್ತೇನೆ.

ಈ ಬಜೆಟ್ ನೋಡಿದರೆ, ಖಾದಿ ಮತ್ತು ಗ್ರಾಮಕೈಗಾರಿಕೆಗಳು ಸರಿಯಾದ ರೀತಿಯಲ್ಲಿ ನಡೆಯುತ್ತಿರಲಿಲ್ಲವೆಂದು ಈ ಇಲಾಖೆಯನ್ನು ಮುಚ್ಚುತ್ತೇವೆಂದು ಹೇಳಲಾಗಿದೆ. ಇದರಲ್ಲಿ ಕೆಲವು 'ಎಕ್ಸಪೆರಿಮೆಂಟಲ್ ಸೆಂಟರ್ಸ್' ಆಗಿದ್ದವು. ಎಂದರೆ, ಹೇಗಾಗಬಹುದೆಂದು ಪರಿಶೀಲನೆ ನಡೆಸುವ ಕೇಂದ್ರಗಳಾಗಿದ್ದುವು. ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಕೋಟ್ಯಾಂತರ ರೂಪಾಯಿ ಬಂಡವಾಳ ಹಾಕುತ್ತೀರಿ. ಅಲ್ಲಿನ ಅಧಿಕಾರಿಗಳಿಗೆ ಮನೆಗಳನ್ನು ಕಟ್ಟಿಸಿ ಕೊಡುತ್ತೀರಿ. ಹೀಗಿರುವಾಗ ಗೃಹಕೈಗಾರಿಕೆಗಳ ವಿಷಯದಲ್ಲಿ ಈರೀತಿ ಸವತಿ ಮತ್ಸರವೇಕೆ! ಇಷ್ಟು ಹಣ ಹಾಕಿದೆವು, ಅಷ್ಟು ಹಣ ಹಾಕಿದೆವು, ಲಾಭ ಬರಲಿಲ್ಲ ಎಂದು ಹೇಳುವುದೇಕೆ! ಭದ್ರಾವತಿ ಕಾರ್ಖಾನೆಗೆ ಕೋಟ್ಯಾಂತರ ರೂಪಾಯಿಗಳನ್ನು ಹಾಕುತ್ತಿದ್ದರೂ 15—20 ವರ್ಷಗಳು ಲಾಭ ಬರುತ್ತಿರಲಿಲ್ಲ. ಹೀಗಿರುವಾಗ ಇದೊಂದು ದೊಡ್ಡ ನಷ್ಟವೆ? ಗೃಹಕೈಗಾರಿಕೆಗೆ ಉತ್ತೇಜನ ಕೊಡದಿದ್ದರೆ ಮುಂದೆ ಏನು ಪರಿಣಾಮವಾಗುತ್ತದೆಂಬುದನ್ನು ಮನಗಾಣಬೇಕು. ದೊಡ್ಡ ಕಾರ್ಖಾನೆಗಳಿರುವ ಪಟ್ಟಣಗಳಲ್ಲಿ ಕೂಲಿಯವರು ಒಂದೇಕಡೆ ಸೇರುತ್ತಾರೆ. ಆದರಿಂದ ಎಲ್ಲರಿಗೂ ಎಷ್ಟೋ ರೀತಿಯಲ್ಲಿ ತೊಂದರೆಯಾಗುವುದಲ್ಲದೆ ಸರ್ಕಾರದ ಮುಂದೆ ಎಷ್ಟೋ ಸಮಸ್ಯೆಗಳು ಬರುತ್ತವೆ. ಆದಕಾರಣ ಆಯಾ ಪ್ರದೇಶದಲ್ಲಿ ನಡೆಸಬಹುದಾದ ಕೈಗಾರಿಕೆಗಳು ಅಲ್ಲಲ್ಲೇ ನಡೆಯಲು ಉತ್ತೇಜನ ಕೊಡಬೇಕು. ಉದಾಹರಣೆಗೆ ಎತ್ತಿನ ಗಾಣಗಳಿಗೆ ಸರ್ಕಾರ ಉತ್ತೇಜನ ಕೊಡಬೇಕು. ದೊಡ್ಡ ದೊಡ್ಡ ಮಿಲ್ಲುಗಳಿಗೆ, ರೋಟರಿಗಳಿಗೆ, ಎಕ್ಸಪೆಲ್ಲರುಗಳಿಗೆ ಉತ್ತೇಜನ ಕೊಡುತ್ತಾರೆ. ಗ್ರಾಮಕೈಗಾರಿಕೆಯಾದ ಗಾಣವನ್ನು ಹಾಕಿ ಕೆಲಸ ಮಾಡುವ ಕೆಲಸಗಾರನಿಗೆ ಯಾವ ಉತ್ತೇಜನವೂ ಇಲ್ಲ. ಹೀಗಿರುವಾಗ ಗಾಣದ ಎಣ್ಣೆ ಹೇಗಾಗಬೇಕು? ಮೈಸೂರು ದೇಶದಲ್ಲಿ ಎಕ್ಸಪೆಲ್ಲರುಗಳು ಯಥೇಚ್ಛವಾಗಿವೆ. ದೇಶದಲ್ಲಿ ಉತ್ಪತ್ತಿಯಾಗುವ ಎಣ್ಣೆ ಬೀಜಗಳೆಲ್ಲವನ್ನೂ ಕ್ರಷ್ ಮಾಡುತ್ತಿವೆ. ಇದರಿಂದ ಗಾಣ ಇಟ್ಟುಕೊಂಡಿರುವ ರೈತನಿಗೆ ಯಾವ ಉತ್ತೇಜನವೂ ಸಿಕ್ಕುತ್ತಿಲ್ಲ. ರೋಟರಿಗಳು ಎಕ್ಸಪೆಲ್ಲರುಗಳು ಎಷ್ಟಿವೆಯೆಂದು ಪರಿಶೀಲನೆ ಮಾಡಿದರೆ, ಎಷ್ಟಿದ್ದರೆ ಎಷ್ಟು ಎಣ್ಣೆ ಬೀಜ ಖರ್ಚಾಗುತ್ತದೆ ಎಂಬುದನ್ನು ಪರಿಶೀಲನೆ ಮಾಡಿದರೆ, ಇವುಗಳಿಗೆಲ್ಲಾ ಸಾಕಾಗುವಷ್ಟು ಬೀಜವಿಲ್ಲದೆ ವರ್ಷದಲ್ಲಿ ಮೂರು ತಿಂಗಳು ಮಾತ್ರ ನಡೆಯುತ್ತಿವೆ; ಇನ್ನು ಒಂಭತ್ತು ತಿಂಗಳು ಕೆಲಸವಿಲ್ಲ. ಗಾಣಕ್ಕಂತೂ ಕೆಲಸವೇ ಇಲ್ಲ. ಹೀಗೆ ಎಲ್ಲೆಲ್ಲಿ ಯಾವ ಯಾವ ಕಾರ್ಖಾನೆ ಇರಬೇಕು, ಯಾವರೀತಿ ಕೆಲಸ ಮಾಡಬೇಕೆಂಬುದನ್ನು ಪರಿಶೀಲನೆ ಮಾಡಬೇಕು. ಚರಕ, ಮಗ್ಗ, ಪವರ್ ಲೂಮ್ಸ್, ಸ್ಪಿನ್ನಿಂಗ್ ವೀಲ್ಸ್ ಇವುಗಳೆಲ್ಲವನ್ನೂ ಗಣನೆಗೆ ತಂದುಕೊಂಡು, ಎಲ್ಲೆಲ್ಲಿ ಯಾವ ಯಾವುದು ಕೆಲಸ ಮಾಡಬೇಕೆಂಬುದನ್ನು ಗೊತ್ತುಮಾಡಬೇಕು.

ಈ ದಿವಸ ಹತ್ತಿ ಬೆಳೆಯುವುದು ಎಲ್ಲೆಲ್ಲಿಯೂ ಜಾಸ್ತಿಯಾಗಿದೆ. ಆದರೆ ಹಾಗೆ ಬೆಳೆಯಲಾದ ಹತ್ತಿಯು ನಮ್ಮ ದೇಶದಲ್ಲಿ ಉಪಯೋಗಿಸಲ್ಪಡದೆ ಪರದೇಶಕ್ಕೆ ಹೋಗುತ್ತಿದೆ. ಆದರೆ ಹಾಗೆ ಪರದೇಶಕ್ಕೆ ಕಳುಹಿಸುವಂಥ ಸಾಮಾನುಗಳನ್ನು ಬೆಳೆಯುವ ಬದಲು ನಾವು ಇಲ್ಲಿ ಆಹಾರ ಸಾಮಗ್ರಿಗಳನ್ನೇ ಬೆಳದಿದ್ದರೆ, ನಮಗೆ ಈ ದಿವಸ ಪರದೇಶದ ಆ ಜೋಳ, ಗೋಧಿ ಮುಂತಾದವುಗಳಿಗೆ ಕೈಒಡ್ಡಬೇಕಾದ ಆವಶ್ಯಕತೆ ಇರುತ್ತಿರಲಿಲ್ಲವೆಂದು ಹೇಳುತ್ತೇನೆ. ಹೀಗೆ ರೈತನಾಗಿರತಕ್ಕವನು ಈ ದಿವಸ ಏನಿದ್ದರೂ ದುಡ್ಡಿನ ಆಸೆಗಾಗಿ ಆಹಾರ ಧಾನ್ಯಗಳ ಬೆಳೆಗೆ ಹೆಚ್ಚು ಗಮನಕೊಡದೆ, ಈ ಡಾಲ್ಡ ಇತ್ಯಾದಿ ಎಣ್ಣೆ ಪದಾರ್ಥಗಳ ತಯಾರಿಕೆಗೆ ಆವಶ್ಯಕವಾದ ಸೇಂಗಾ ಇತ್ಯಾದಿಗಳನ್ನು ಬೆಳೆಯಲು ಪ್ರಾರಂಭಿಸಿದ್ದರಿಂದ ನಮಗೆ ಇಂದು ಈ ಆಹಾರದ ಕೊರತೆಯುಂಟಾಗಿದೆ. ಆದಾದರಿಂದ ದೇಶದಲ್ಲಿ ನಮಗೆ ಎಷ್ಟು ಆಹಾರ ಧಾನ್ಯದ ಆವಶ್ಯಕತೆಯಿದೆಯೋ ಅಷ್ಟನ್ನು ಬೆಳೆದುಕೊಂಡನಂತರವೇ ಬೇರೆ ಧಾನ್ಯಗಳ ಬೆಳೆಗೆ ಅವಕಾಶ ಕೊಡುವುದು ಸೂಕ್ತವೆಂದು ತೋರುತ್ತದೆ. ಈ ದಿವಸ ನಾವು ನಮ್ಮ ಮುಂದೆ ಇಟ್ಟಿರತಕ್ಕ ಬಜೆಟ್ಟನ್ನು ಪರಿಶೀಲಿಸಿದರೆ, ನಾವು ಸಿಬ್ಬಂದಿಗೆ ಸಂಬಳದ ರೂಪವಾಗಿ ಎಷ್ಟು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆಂಬುದು ಗೊತ್ತಾಗುತ್ತದೆ. ಇನ್ನು ಅದು ಕಳೆದನಂತರ ಉಳಿಯತಕ್ಕ ಹಣದಲ್ಲಿ ದೇಶದಲ್ಲಿರತಕ್ಕ ರೈತನ ಮತ್ತು ಕೂಲಿಗಾರನ ಒಂದು ವ್ಯವಸ್ಥೆ ಮಾಡಬೇಕಾಗಿದೆ. ಈ ದಿವಸ ನಮ್ಮ ಸರ್ಕಾರಕ್ಕೆ ಬರತಕ್ಕ 2 ಕೋಟಿ ರೂಪಾಯಿಗಳ ಆದಾಯದಲ್ಲಿ ರೈತನಿಗೂ, ಕೂಲಿಗಾರನಿಗೂ ನೇರವಾಗಿ ಎಷ್ಟು ಹೋಗುತ್ತಿದೆಯೆಂಬುದನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಆದುದರಿಂದ ನೌಕರಿ ವರ್ಗದಲ್ಲಿ ಆಗುತ್ತಿರುವ ಖರ್ಚನ್ನು ತಗ್ಗಿಸಿ, ಮುಂದಕ್ಕೆ ತಯಾರಿಸುವ ಬಜೆಟ್ಟಿನಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿ ಮಂಡಿಸುತ್ತಾರೆಂದು ತಿಳಿದುಕೊಂಡಿದ್ದೇನೆ.

ಇನ್ನೊಂದು ವಿಷಯವೇನೆಂದರೆ—ಈ ದಿವಸ ನಮ್ಮ ಎದುರಿಗೆ ಕುಳಿತಿರತಕ್ಕ ಎದುರುಪಕ್ಷದ ಮಾನ್ಯಸದಸ್ಯರುಗಳು ನಮ್ಮ ಮೈಸೂರು ಧ್ವಜವನ್ನು ತೆಗೆದುಬಿಟ್ಟಿದ್ದ

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿಯವರು.)

ಕ್ಕಾಗಿ, ಅದು ಸರಿಯಲ್ಲ ಮತ್ತು ನ್ಯಾಯವಾದದ್ದೂ ಅಲ್ಲ ಎಂಬ ಒಂದು ವಾದವನ್ನೆತ್ತಿದ್ದಾರೆ. ಹಿಂದಿನ ಕಾಲದ ರಾಜರುಗಳ ಆಳ್ವಿಕೆಯಲ್ಲಿ ರಾಷ್ಟ್ರಧ್ವಜ ಒಂದು ವಿನಾ ಯಾವ ಒಬ್ಬ ಪಾಳೇಗಾರನಿಗೂ ಆತನ ಧ್ವಜವನ್ನು ಹಿಡಿಯಲು ಅವಕಾಶ ಕೊಡುತ್ತಿದ್ದಿಲ್ಲ. ಅದೇ ರೀತಿ ನಾವು ನಮಗೆ ಸ್ವಾತಂತ್ರ್ಯ ಬಂದ ಕೂಡಲೆ, ಯಾವಾಗ ಸ್ವರಾಜ್ಯವನ್ನು ಸ್ಥಾಪಿಸಿದೆವೋ ಆ ದಿವಸವೇ ನಮ್ಮ ಸ್ವರಾಜ್ಯಕ್ಕೆ ಯಾವ ಒಂದು ಬಾವುಟ ಇರಬೇಕಾದ್ದು ನ್ಯಾಯ ಎಂಬುದನ್ನು ತೀರ್ಮಾನಮಾಡಿಬಿಟ್ಟಿದ್ದೇವೆ. ಅದರ ಬಗ್ಗೆ ಇಂಡಿಯನ್ ಕಾನ್‌ಸ್ಟಿಟ್ಯೂಷನ್ನಿನಲ್ಲೇ ಒಂದು ಕ್ಲಾಜನ್ನು ಸೇರಿಸಲಾಗಿದೆ. ಈ ದಿವಸ ನಾವೆಲ್ಲರೂ ಭಾರತೀಯರು, ಭಾರತದ ಪ್ರಜೆಗಳು. ಈ ಬಾವುಟ ಇತ್ಯಾದಿಗಳ ವಿಷಯವನ್ನೆಲ್ಲಾ ನಾವು ಕೇಂದ್ರ ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದೇವೆ. ಆ ದಿವಸವೇ ಅವರು ಯಾವ ಒಂದು ಬಾವುಟವನ್ನು ಇಡೀ ದೇಶದ, ಎಂದರೆ ಭಾರತದ, ಹೆಗ್ಗುರುತಾಗಿ ಎತ್ತಿಹಿಡಿದಿದ್ದಾರೋ ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಅದಕ್ಕನುಸಾರವಾಗಿಯೇ ನಾವು ಈ ದಿವಸ ಇಲ್ಲಿ ನಮ್ಮ ಒಳರಾಷ್ಟ್ರದ ಧ್ವಜವನ್ನು ಬದಲಾಯಿಸಿದ್ದೇವೆ. ಇದರಲ್ಲಿ ಯಾವ ಲೋಪವೂ ಆಗಿಲ್ಲ. ಟೀಕಾಕಾರರಿಗೆ ಟೀಕೆ ಮಾಡಲು ಯಾವಾಗಲೂ ಅವಕಾಶವಿದ್ದೇ ಇರುತ್ತದೆ. ಇದಕ್ಕೆ ಒಂದು ಸಣ್ಣ ಕಥೆ ಇದೆ. ತಂದೆ ಮಗ ಈ ಇಬ್ಬರೂ ಒಂದು ಕುದುರೆ ಮೇಲೆ ಸವಾರಿ ಮಾಡಿಕೊಂಡು ಹೋಗುತ್ತಿದ್ದಾಗ, ಮಗ ಕುದುರೆ ಹತ್ತಿದರೆ ಜನರು, 'ಏನಯ್ಯ ಮುದುಕ ನಡೆಯಬೇಕು, ನೀನು ಕುದುರೆ ಮೇಲೆ ಸವಾರಿ ಮಾಡಬೇಕೇ!' ಎಂದು ಕೇಳಿದರಂತೆ. ಆಗ ಆತನು ಇಳಿದು ಮುದಕ ಕುದುರೆ ಹತ್ತಿದ ಮೇಲೂ, ಜನರು 'ಏನಯ್ಯ ಹುಡುಗನನ್ನು ನಡೆಸಿಕೊಂಡು, ನೀನು ಕುದುರೆ ಮೇಲೆ ಹತ್ತಿಕೊಂಡು ಹೋಗುತ್ತಿಯಲ್ಲಾ?' ಎಂದರಂತೆ; ಹೀಗೆ ಯಾರು ಕುದುರೆ ಹತ್ತಿದರೂ ಟೀಕೆ ಅವಕಾಶವಿದ್ದೇ ಇತ್ತು....

ಜನಾಬ್ ಜೆ. ಮಹಮುದ್ ಇಮಾಂರವರು.—ಏನು ಸ್ವಾಮಿ ನಾವುಗಳು ಇಲ್ಲಿಗೆ ಬಂದಿರುವುದು, ಅವರು ಕಥೆ ಹೇಳುವುದಕ್ಕೆ, ನಾವು ಕಥೆ ಕೇಳುವುದಕ್ಕೇನೋ?

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಹೀಗೆಯೇ ಇವೆ, ನಮ್ಮ ಎದುರುಪಕ್ಷದವರು ಮಾಡಿರತಕ್ಕ ಟೀಕೆಗಳು. ಅವರು ಮಾಡಿರತಕ್ಕ ಟೀಕೆಗಳನ್ನೆಲ್ಲಾ ಪರಿಶೀಲನೆಮಾಡಿ ನೋಡಿದರೆ, ಟೀಕೆ ಮಾಡಲೇಬೇಕೆಂಬ ಒಂದು ಮನೋಭಾವದಿಂದಲೇ ಅವರು ಹಾಗೆ ಮಾತನಾಡಿದ್ದಾರೆಂಬುದು ನನಗೆ ಎದ್ದು ಕಾಣುತ್ತದೆ.

Sri S. SRINIVASA IYENGAR.—Mr Speaker, Sir.

(ಸಭೆಯಲ್ಲಿದ್ದ ಅನೇಕ ಸದಸ್ಯರು ಕನ್ನಡದಲ್ಲಿ ಮಾತನಾಡಿ ಎಂದು ಒತ್ತಾಯ ಪಡಿಸಿದರು).

ಆಗಬಹುದು. ಕನ್ನಡದಲ್ಲಿಯೂ ಭಾಷಣಮಾಡಬಹುದು. ಆದರೆ ಕೆಲವು ಪ್ರಾಮುಖ್ಯವಾದ ವಿಚಾರಗಳನ್ನು ತಿಳಿಸಬೇಕಾದರೆ, ನನ್ನ ಅಭಿಪ್ರಾಯಗಳನ್ನು ಇಂಗ್ಲೀಷಿನಲ್ಲಾದರೆ ಚೆನ್ನಾಗಿ ತಿಳಿಸಬಲ್ಲೆನೆಂದು ತಿಳಿದುಕೊಂಡಿದ್ದೇನೆ. ಕನ್ನಡವಾದರೂ ಪರವಾಗಿಲ್ಲ.

Sir, while speaking on the Budget, I do not propose to repeat the observations made by the Leader of the Opposition and other Members of this House, but I will certainly confine myself to a few heads proposed in the Budget. While speaking about the revenue receipts of the State, if we look at the statistics provided in the memorandum of 1950-51 of the State Budget, we could very well see that we commenced with Rs. 116 lakhs of land revenue in 1938-39 and this day we are having Rs. 134 lakhs. But our administrative charges have risen from 27·98 lakhs in 1938-39 to 60·34 lakhs in 1952-53. So while examining this, let us see whether it would be possible for the Finance Minister to adopt certain economies under this head. In addition to the propositions already made as regards the reduction of the number of districts I would add that decentralisation is the thing that we should aim at to-day. More of centralisation would be quite harmful and as such economy measures in the revenue administration would be more suitable than the reduction of the number of districts. While recommending this economy measure, I beg to place before this House that the sub-division officers in all districts in all sub-divisions are acting just like post-offices. Papers leaving the office of the Deputy Commissioner touch the office of the sub-division and reach the taluk office to get into places where light can never penetrate, and as such I would submit that instead of expending so much of money in the maintenance of these sub-divisions, it would be more proper to raise the level of the administration of the taluks, to provide a little additional personnel to the Deputy Commissioner and confer on the Deputy Commissioner greater powers so that the person who needs relief may get it quickly without the inordinate delay that we are experiencing to-day. That would solve a very big problem. It will reduce our revenue expenditure.

Secondly, while speaking on the State Forests, our revenue in 1938-39 was just 26·25 lakhs, while our expenditure was 14·18 lakhs. What is it to-day? Our forest revenue is 80·19 lakhs; our exependiture 38·73 lakhs. What percentage does it work out if we calculate? It is certainly 45 per cent of the revenues we spend for establishment. That is one source where you can

certainly improve your resources by cutting down the establishment, by strictly enforcing aforestation. At present I could submit to this House that passes have been issued indiscriminately and has resulted in the wiping out of forests. Have we adopted any measures or has this Budget any provision for proper aforestation? At least, is the provision for aforestation properly implemented? Certainly not. I can give instances wherein many places have become absolute vacant lands. I submit that while providing for the establishment of Forest Department necessary vigilance may be exercised, thereby saving the forest and assuring us of proper rainfall.

The third point I would like to mention without the fear of repetition would be, the Road Transport Scheme. What a colossal waste we are having? For a receipt of 38·30 lakhs we are spending 36·80 lakhs. It includes the cost of petrol and other things we buy. I have read that statement coolly. What does it amount to? We are having a very heavy administrative system in the Road Transport Scheme. Is it not possible, I put it to the Hon'ble Finance Minister, to work it in a business like way? Are there not instances wherein for a small investment high profits are received? Now having taken the receipt of 38·30 lakhs, the surplus or the net profit to us is only 1½ lakhs, while the expenses towards general administration for Road Transport is 1·10 lakhs. We just get a turnover of 38·3 lakhs. It comes to 4½ per cent. How does it compare with our loans. We pay 5 per cent on our loans and get back 4 per cent for the return. It is absolutely lamentable. Something has to be done to improve the Road Transport Scheme.

As regards the balancing of the Budget, I do not purpose to handle this mathematical calculation, even though I am competent as an Engineering Graduate to handle the subject with authority. But now since many persons have already exepressed about this mathematical jugglery, I do not like to handle this mathematical jugglery. I do not propose to proceed that way at all. But while speaking on this, I would like to impress that the revenues of the State could be expanded. In the Budget now presented, no indication is shown under what heads it could be done. Let us see whether the Finance Minister is trying to do it. I dare say, no. It is just because, in respect of these development schemes, provisions have been made without devoting the care that they are necessary for the particular heads. For example I would quote one instance, that is the Government Silk Weaving Factory.

Sri H. SIDDAVEERAPPA.—What are the suggestions of the Hon'ble Member for augmenting the revenues of the State.?

Sri S. SRINIVASA IYENGAR.—I am just proceeding on those lines. As regards the steps that have to be taken to improve the resources of the State, as the Hon'ble Minister is very anxious to know, and which I was about to state, I would quote and confine myself to one or two heads only, because the time the Speaker has kindly permitted me limits my capacity to answer and the subjects I can deal with. Now taking for example, on these commercial concerns run by Government, as an Engineer as I have already stated, I can speak with certain knowledge about them. Now taking the Mysore Silk Weaving Factory, it was a paying concern in the State. The profit of the concern during 1944-45 was 1,72,000 rupees. During 1945-46, it was Rs. 1,92,000. During 1946-47, it was Rs. 1,64,000. During 1947-48, it was Rs. 2½ lakhs. How is it that during 1949-50 it has come down to Rs. 60,000? And during 1950-51 there is nil profit and loss is the result.

Sri K. HANUMANTHAIYA.—It is due to market conditions.

Sri SRINIVASA IYENGAR.—I am coming to that.

Sri H. SIDDAVEERAPPA.—Coming from the area, the Hon'ble Member knows the reasons and the causes for this.

Sri S SRINIVASA IYENGAR.—Yes, Sir, I am explaining the causes and the reason. But the omission on the part of the Government, I am placing before the House. I stood up here to speak

(SRI S. SRINIVASA IYENGAR)

